# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶುಕ್ರವಾರ, ಆಗಸ್ಟ್ 02, 2024

ಸಂಪುಟ : 51 ಸಂಚಿಕೆ : 80 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಅಪ್ಪರ್ ಭದ್ರಾ ಬಗ್ಗೆ ಭಯಬೇಡ, ಅದು ಕನಸಾಗಿ ಉಳಿಯಲಿದೆ : ನರಸಿಂಹಪ್ಪ

**ಒಗ್ಗಟ್ಟು ಪ್ರದರ್ಶಿಸಿದ ಬಿಜೆಪಿಯ ಲಗಾನ್ ಟೀಮ್‌ನಿಂದ ಶಕ್ತಿ ಪ್ರದರ್ಶನ**

ಶಿವಮೊಗ್ಗ, ಆ.1- ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಅಚ್ಚುಕಟ್ಟಿನ ರೈತರಿಗೆ ಭಯಬೇಡ. ಏಕೆಂದರೆ ಆ ಯೋಜನೆಗೆ ಕೇಂದ್ರ ಸರ್ಕಾರ ಅಷ್ಟೊಂದು ಅನುದಾನ ನೀಡಲ್ಲ. ಹಾಗಾಗಿ ಅದು ಪೂರ್ತಿಯಾಗಿ ಜಾರಿ ಆಗಲ್ಲ ಎಂದು ನೀರಾವರಿ ತಜ್ಞ ಪ್ರೊ. ಸಿ.ನರಸಿಂಹಪ್ಪ ಹೇಳಿದರು.

ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಗುರುವಾರ ಭಾರತೀಯ ರೈತ ಒಕ್ಕೂಟದಿಂದ ಹಮ್ಮಿಕೊಂಡಿದ್ದ ಬಾಗಿನ ಅರ್ಪಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಪ್ಪರ್ ಭದ್ರಾ ಸಂಪೂರ್ಣವಾಗಿ ಜಾರಿಯಾಗುವುದು ಸುಲಭದ ಕೆಲಸವಲ್ಲ. ಆ ಯೋಜನೆ ಕನಸಾಗಿ ಉಳಿಯಲಿದೆ. ರಾಜ್ಯದಲ್ಲಿ ಅಕ್ರಮ ಪಂಪ್‌ಸೆಟ್‌ಗಳ ತೆರವಿಗಾಗಿ ಹೊಸ ಕಾನೂನು ಜಾರಿಯಾಗಲು ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರ ಹಿತಾಸಕ್ತಿ ಅರ್ಜಿಯೇ ಕಾರಣವಾಗಿದೆ.

ಸರ್ಕಾರ ಹೊಸ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ಪ್ರೊ. ನರಸಿಂಹಪ್ಪ ಆಗ್ರಹಿಸಿದರು.

ಭದ್ರಾ ಡ್ಯಾಮ್ ಚಿಕ್ಕಮಗಳೂರು ಜಿಲ್ಲೆಯಲ್ಲಿದ್ದರೂ ಶೇ.70 ರಷ್ಟು ನೀರನ್ನು ದಾವಣಗೆರೆ ಜಿಲ್ಲೆಯ ರೈತರು ಬಳಕೆ ಮಾಡುತ್ತಿರುವುದರಿಂದ ದಾವಣಗೆರೆ ಜಿಲ್ಲೆಯವರನ್ನೇ ಭದ್ರಾ ಕಾಡಾ ಅಧ್ಯಕ್ಷರನ್ನಾಗಿ ನೇಮಿಸಬೇಕು. ಬೇರೆ ಜಿಲ್ಲೆಯವರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಕೊನೆ ಭಾಗದ ರೈತರ ಸಮಸ್ಯೆ ಅವರಿಗೆ ಗೊತ್ತಾಗುವುದಿಲ್ಲ ಮತ್ತು ನೀರಿನ ವೇಳಾಪಟ್ಟಿ ನಿಗದಿ ಪಡಿಸಲು ಅವರಿಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದು ನರಸಿಂಹಪ್ಪ ಅಭಿಪ್ರಾಯಪಟ್ಟರು.

ಈ ಹಿಂದೆ ನಡೆದ ಭದ್ರಾ ನಾಲೆಗಳ ಆಧುನೀಕರಣ ಪೂರ್ಣ ಪ್ರಮಾಣದಲ್ಲಿ ಆಗಿಲ್ಲ. ಆ ಕೆಲಸವನ್ನು ಬೇಸಿಗೆ ಸಮಯದಲ್ಲಿ ಮಾಡಿದರೆ ಮಾತ್ರ ಕೊನೆ ಭಾಗದ ರೈತರಿಗೆ ನೀರು ತಲುಪುತ್ತದೆ.


ಕಾವೇರಿ ಡ್ಯಾಮ್ ನಮ್ಮ ಡ್ಯಾಮ್‌ಗಿಂತ ಸಣ್ಣ ಡ್ಯಾಮ್ ಆಗಿದ್ದರೂ ಸಹ ಸದಾ ಸುದ್ದಿಯಲ್ಲಿರುತ್ತದೆ. ನಮ್ಮ ಡ್ಯಾಮ್ ಸದ್ದಿಲ್ಲದೇ ಬಹಳ ಸೇಫಾಗಿದೆ ಮತ್ತು ಸುರಕ್ಷಿತವಾಗಿದೆ ಎಂದು ಪ್ರೊ. ನರಿಸಿಂಹಪ್ಪ ಹೇಳಿದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಭದ್ರಾ ಉಳಿವಿಗಾಗಿ ಪ್ರೊ. ನರಸಿಂಹಪ್ಪ ಮತ್ತು ಎಸ್.ಎ.ರವೀಂದ್ರನಾಥ್ (2ನೇ ಪುಟಕ್ಕೆ)

# ಒಳಮೀಸಲಾತಿ: ರಾಜ್ಯಗಳಿಗೆ ಅಧಿಕಾರ

## ಏಳು ಸದಸ್ಯರ ಸಂವಿಧಾನಿಕ ಪೀಠ 6-1ಅಂತರದ ಬಹುಮತದ ತೀರ್ಪು

ನವದೆಹಲಿ, ಆ. 1 - ಪರಿಶಿಷ್ಟ ಜಾತಿಗಳಲ್ಲಿ ಸಾಮಾಜಿಕ ವೈವಿಧ್ಯತೆ ಇದೆ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಅತ್ಯಂತ ಹಿಂದುಳಿದವರಿಗೆ ಒಳ ಮೀಸಲಾತಿ ಕಲ್ಪಿಸಲು ರಾಜ್ಯಗಳಿಗೆ ಸಂವಿಧಾನಾತ್ಮಕ ಅಧಿಕಾರ ಇದೆ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.



ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಏಳು ಸದಸ್ಯರ ಸಂವಿಧಾನಿಕ ಪೀಠ 6-1ಅಂತರದ ಬಹುಮತದ ತೀರ್ಪು ನೀಡಿದೆ.

ಪರಿಶಿಷ್ಟ ಜಾತಿಗಳನ್ನು ಒಂದೇ ವರ್ಗವೆಂದು ಕಾಣಬೇಕು ಎಂದು 2014ರಲ್ಲಿ ಐವರು ಸದಸ್ಯರ ಸುಪ್ರೀಂ ಕೋರ್ಟ್ ಪೀಠ ನೀಡಿದ ತೀರ್ಪನ್ನು ಏಳು ಸದಸ್ಯರ ಪೀಠ ತಳ್ಳಿ ಹಾಕಿದೆ.

ಪರಿಶಿಷ್ಟ ಜಾತಿಯವರು ಸಾಮಾಜಿಕವಾಗಿ ವೈವಿಧ್ಯಮಯ ವರ್ಗಕ್ಕೆ ಸೇರಿದವರು ಎಂಬುದು ಐತಿಹಾಸಿಕವಾಗಿ ಹಾಗೂ ಪ್ರಾಯೋಗಿಕವಾದ ಸಾಕ್ಷಿಗಳಿಂದ ತಿಳಿದುಬರುತ್ತದೆ. (2ನೇ ಪುಟಕ್ಕೆ)

### ಪರಿಶಿಷ್ಟರಿಗೆ ಕೆನೆ ಪದರ ಅನ್ವಯಿಸಬೇಕು

**ರಾಜ್ಯಗಳು ಈ ಬಗ್ಗೆ ನೀತಿ ರೂಪಿಸಲಿ ಎಂದ ಸುಪ್ರೀಂ ಕೋರ್ಟ್**

ನವದೆಹಲಿ, ಆ. 1 – ಪರಿಶಿಷ್ಟ ಜಾತಿ ಹಾಗೂ ಪಂಗಡಗಳಲ್ಲಿರುವ ಕೆನೆಪದರ ವರ್ಗದವರನ್ನು ಮೀಸಲಾತಿ ವ್ಯಾಪ್ತಿಯಿಂದ ಹೊರಗಿಡಲು ರಾಜ್ಯಗಳು ನೀತಿ ರೂಪಿಸಬೇಕು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಒಳಮೀಸಲಾತಿಗೆ ಸಂಬಂಧಿಸಿದಂತೆ ಬಹುಮತದ ತೀರ್ಪಿನ ಭಾಗವಾಗಿರುವ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಈ ನಿಲುವು ತಳೆದಿದ್ದಾರೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಏಳು ಸದಸ್ಯರ ಪೀಠ 6-1ರ ಬಹುಮತದಿಂದ ಒಳಮೀಸಲಾತಿ ನೀಡುವ ಅಧಿಕಾರ ರಾಜ್ಯಗಳಿಗೆ ಇದೆ ಎಂಬ ತೀರ್ಪು ನೀಡಿದೆ.

ಬಹುಮತದ ತೀರ್ಪಿಗೆ ಅನುಗುಣವಾಗಿ ಪ್ರತ್ಯೇಕ ತೀರ್ಪು ಬರೆದಿರುವ ನ್ಯಾಯಮೂರ್ತಿ ಗವಾಯಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಲ್ಲಿರುವ ಕೆನೆ ಪದರವರನ್ನು ಗುರುತಿಸಿ ಅವರನ್ನು ಮೀಸಲಾತಿ ವ್ಯಾಪ್ತಿಯಿಂದ ಹೊರಗಿಡಬೇಕು. ಇದರಿಂದ ಮಾತ್ರ ಸಂವಿಧಾನದಲ್ಲಿ (2ನೇ ಪುಟಕ್ಕೆ)

### ತೀರ್ಪಿಗೆ ಸಿಎಂ ಸ್ವಾಗತ ಸಮಾಲೋಚಿಸಿ ಕ್ರಮ

ಬೆಂಗಳೂರು, ಆ. 1 - ಪರಿಶಿಷ್ಟರಲ್ಲಿ ಅತಿ ಹಿಂದುಳಿದವರನ್ನು ಗುರುತಿಸಿ ಒಳ ಮೀಸಲಾತಿ ನೀಡುವ ರಾಜ್ಯ ಸರ್ಕಾರಗಳ ಅಧಿಕಾರವನ್ನು ಎತ್ತಿಹಿಡಿದಿರುವ ಸುಪ್ರೀಂ ಕೋರ್ಟ್ ತೀರ್ಪು ಐತಿಹಾಸಿಕವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ನ್ಯಾಯಾಲಯದ ಈ ತೀರ್ಪನ್ನು ನಾನು ಮುಕ್ತವಾಗಿ ಸ್ವಾಗತಿಸುತ್ತೇನೆ. ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಒಳಮೀಸಲಾತಿ ಅನುಷ್ಠಾನದ ಹಾದಿಯಲ್ಲಿನ ಮುಖ್ಯ ಅಡ್ಡಿಯೊಂದು ನಿವಾರಣೆಯಾಗಿದೆ ಎಂದವರು ಹೇಳಿದ್ದಾರೆ.

ತೀರ್ಪಿನಲ್ಲಿರುವ ವಿವಾದಾತ್ಮಕ ಕೆನೆಪದರದ ಬಗೆಗಿನ ಅಂಶವೂ ಸೇರಿದಂತೆ ಇತರೆ (2ನೇ ಪುಟಕ್ಕೆ)

## ಒಲಂಪಿಕ್‌ನಲ್ಲಿ ಭಾರತಕ್ಕೆ ಮೂರನೇ ಕಂಚು 50 ಮೀಟರ್ ಶೂಟಿಂಗ್‌ನಲ್ಲಿ ಸ್ವಪ್ನಿಲ್‌ಗೆ ಯಶಸ್ಸು



ನವದೆಹಲಿ, ಆ. 1 - ಒಲಿಂಪಿಕ್ ಪಂದ್ಯಾವಳಿಯಲ್ಲಿ ಸ್ವಪ್ನಿಲ್ ಕುಸಾಲೆ ಅವರು 50 ಮೀಟರ್ ರೈಫಲ್ 3 ಪಿ ವಿಭಾಗದಲ್ಲಿ ಭಾರತಕ್ಕೆ ಕಂಚಿನ ಪದಕ ತಂದುಕೊಟ್ಟಿದ್ದಾರೆ.

ಎಂಟು ಶೂಟರ್‌ಗಳ ಅಂತಿಮ ಪಂದ್ಯದಲ್ಲಿ ಕುಸಾಲೆ ಅವರು 451.4 ಅಂಕಗಳನ್ನು ಗಳಿಸಿ ಪದಕ ಸಾಧನೆ ಮಾಡಿದ್ದಾರೆ. ಇದರೊಂದಿಗೆ ಪ್ರಸಕ್ತ ನಡೆಯುತ್ತಿರುವ ಪ್ಯಾರಿಸ್ ಪಂದ್ಯಾವಳಿಯಲ್ಲಿ ಭಾರತ ಮೂರನೇ ಕಂಚು ಪಡೆದಿದೆ. ಕುಸಾಲೆ ಅವರು ಒಂದು ಹಂತದಲ್ಲಿ ಆರನೇ ಸ್ಥಾನದಲ್ಲಿದ್ದರು. ನಂತರ ದಿಟ್ಟ ಹೋರಾಟ ನಡೆಸಿ ಪದಕ ಗಳಿಸುವ ಮಟ್ಟಕ್ಕೆ ತಲುಪಿದರು.

3ಪಿ ವಿಭಾಗದಲ್ಲಿ ಮೂರು ಭಂಗಿಗಳಲ್ಲಿ ಶೂಟಿಂಗ್ (2ನೇ ಪುಟಕ್ಕೆ)

### ಎಟಿಎಫ್, ವಾಣಿಜ್ಯ ಅಡುಗೆ ಅನಿಲದ ಬೆಲೆ ಹೆಚ್ಚಳ

ನವದೆಹಲಿ, ಆ. 1 - ವೈಮಾನಿಕ ಇಂಧನವಾದ ಎ.ಟಿ.ಎಫ್. ಬೆಲೆಯನ್ನು ಶೇ.2 ಹಾಗೂ 19 ಕೆ.ಜಿ.ಯ ವಾಣಿಜ್ಯ ಸಿಲಿಂಡರ್ ಬೆಲೆಯನ್ನು 6.50 ರೂ. ಗಳಷ್ಟು ಹೆಚ್ಚಿಸಲಾಗಿದೆ.

ಅಂತರರಾಷ್ಟ್ರೀಯ ಬೆಲೆಗಳಿಗೆ ಅನುಗುಣವಾಗಿ ಪ್ರತಿ ತಿಂಗಳು ವೈಮಾನಿಕ ಇಂಧನ ಹಾಗೂ ವಾಣಿಜ್ಯ ಸಿಲಿಂಡರ್ ಬೆಲೆ ಪರಿಷ್ಕರಿಸಲಾಗುತ್ತದೆ.

## ಬಾಳಿನ ಭಾಗ್ಯೋದಯಕ್ಕೆ ಧರ್ಮದ ಬೆಳಕು



ದಾವಣಗೆರೆ, ಆ. 1- ಬಾಳಿನ ಭಾಗ್ಯೋದಯಕ್ಕೆ ಧರ್ಮದ ಬೆಳಕು ಮುಖ್ಯ. ಬಿತ್ತಿದ ಬೀಜಕ್ಕೆ ನೀರು, ಗೊಬ್ಬರ ಹೇಗೆ ಅವಶ್ಯವೋ ಹಾಗೆಯೇ ನೀತಿಗೆ ಧರ್ಮವೂ ಅಷ್ಟೇ ಅವಶ್ಯಕ ಎಂದು ಬಾಳೆ ಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ನಗರದ ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಮಂಗಲ ಭವನದಲ್ಲಿ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆಯವರು ಸಂಘಟಿಸಿದ್ದ ಜನಜಾಗೃತಿ ಧರ್ಮ ಸಮಾವೇಶದ 3ನೇ ದಿನದ ಸಮಾರಂಭದ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ಭಗವಂತನಿತ್ತ ಸಂಪತ್ತು ನಿಜವಾದ ಬಾಳಿನ ಸಂಪತ್ತು. ಭಕ್ತ ಭಗವಂತನೆಡೆಗೆ ಹೋದಾಗ ಜೀವನ ಪಾವನ ಪುನೀತ. ದೇವರ ಮೇಲಿನ ನಂಬಿಕೆ ಮನುಷ್ಯನ ಬಾಳಿಗೆ ಶಾಶ್ವತ ನಂದಾದೀಪ ಎಂದು ನುಡಿದರು.

ದೇವರು ಎಲ್ಲರಲ್ಲೂ ಇರುತ್ತಾನೆ. ಆದರೆ ಎಲ್ಲರೂ (4ನೇ ಪುಟಕ್ಕೆ)

## ಶ್ರೀಮತಿ ಪಾರ್ವತಮ್ಮ ನಿಧನ



ದಾವಣಗೆರೆ ಸಿಟಿ ವಾಸಿ ಆನಕೊಂಡ ದಿ. ಊರುಬಾಗಿಲು ಸಂಕಪ್ಪನವರ ಧರ್ಮಪತ್ನಿ

**ಶ್ರೀಮತಿ ಪಾರ್ವತಮ್ಮ**

ಇವರು ದಿನಾಂಕ 1.8.2024ರ ಗುರುವಾರ ರಾತ್ರಿ 9.20 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ **ಪಾರ್ಥಿವ ಶರೀರವನ್ನು ದಾವಣಗೆರೆಯ ಸರಸ್ವತಿ ನಗರ ದುರ್ಗಾಂಬಿಕಾ ಆಟೋ ಸ್ಟ್ಯಾಂಡ್ 2ನೇ ಮೇನ್, 1ನೇ ಕ್ರಾಸ್‌ನಲ್ಲಿ ಮಧ್ಯಾಹ್ನ 12ರವರೆಗೆ ಅಂತಿಮ ದರ್ಶನಕ್ಕೆ ಇರಿಸಲಾಗುವುದು.** ನಂತರ ಅಂತ್ಯಕ್ರಿಯೆಯನ್ನು ದಿನಾಂಕ 2.8.2024ರ ಶುಕ್ರವಾರ ಮಧ್ಯಾಹ್ನ 1ಕ್ಕೆ ಎಲೆಬೇತೂರಿನ ಮೃತರ ಸ್ವಂತ (ಡಾಬಾ ಹೋಟೆಲ್) ತೋಟದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು : **ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಹಾಗೂ ಬಂಧು-ಮಿತ್ರರು.**

**ಮೊ : 90080 60660, 96112 45729, 78488 55444**

## ಲಿಂಗಾಯತರು ಹಿಂದೂಗಳಲ್ಲ ಎಂಬ ಹೇಳಿಕೆ ಹಾಸ್ಯಾಸ್ಪದ



ಹರಿಹರ, ಜು.30- ಅನುಭವ ಇಲ್ಲದ ಕೆಲವರು, ಲಿಂಗಾಯತರು ಹಿಂದೂಗಳಲ್ಲ ಎಂದು ಹೇಳಿಕೊಂಡು ಹೋಗುತ್ತಿರುವುದು ಹಾಸ್ಯಾಸ್ಪದ ಸಂಗತಿಯಾಗಿದೆ ಎಂದು ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು.

ಅವರು ರಾಣೇಬೆನ್ನೂರು ನಗರದಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಮಾತನಾಡಿದರು. ಸಮಾಜದಲ್ಲಿ ಕೆಲವು ವ್ಯಕ್ತಿಗಳು ಬಸವಣ್ಣನವರು ಹಿಂದೂ ಅಲ್ಲ, ಲಿಂಗಾಯತರು ಹಾಗೂ ವೀರಶೈವರು ಹಿಂದೂವಿನ ಹೊರತಾದವರು ಎಂದು ಗೊಂದಲಗಳ ಹೇಳಿಕೆಯನ್ನು ನೀಡಿ ಸಮಾಜದಲ್ಲಿ ಅಶಾಂತಿ ವಾತಾವರಣವನ್ನು ಸೃಷ್ಟಿಸುವ (2ನೇ ಪುಟಕ್ಕೆ)

## ಚಿಕ್ಕಬೂದಿಹಾಳು ಜಾನಮ್ಮ ನಿಧನ





ದಾವಣಗೆರೆ ತಾಲ್ಲೂಕು, ಚಿಕ್ಕಬೂದಿಹಾಳು ವಾಸಿ

**ದಿ. ಶ್ರೀ ಕೆಂಗೋ ಹನುಮಂತಪ್ಪ** ಮಾಜಿ ಅಧ್ಯಕ್ಷರು,

ಬಯಲು ಸೀಮೆ ಅಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ ಇವರ ಧರ್ಮಪತ್ನಿ

**ಶ್ರೀಮತಿ ಜಾನಮ್ಮ**

ಇವರು ದಿನಾಂಕ 1.8.2024ರ ಗುರುವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 2.8.2024ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಚಿಕ್ಕಬೂದಿಹಾಳು ಗ್ರಾಮದ ಸ್ವಂತ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು : ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಮತ್ತು ಕುಟುಂಬ ವರ್ಗ ಹಾಗೂ ಚಿಕ್ಕಬೂದಿಹಾಳು ಗ್ರಾಮಸ್ಥರು. ಮೊ : 99454 33693**




# ರಾಜ್ಯಪಾಲರ ನೋಟಿಸ್‌ಗೆ ಆಕ್ಷೇಪ

## ಹಿಂಪಡೆಯುವಂತೆ ರಾಜ್ಯ ಸಚಿವ ಸಂಪುಟ ಆಗ್ರಹ

ಬೆಂಗಳೂರು, ಆ. 1 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಕ್ರಮ ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಿರುವ ನೋಟಿಸ್‌ಗೆ ರಾಜ್ಯ ಸಚಿವ ಸಂಪುಟ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವುದಲ್ಲದೆ, ನೋಟಿಸ್ ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಪಸ್ಥಿತಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಇಂದಿಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

ರಾಜ್ಯಪಾಲರ ವರ್ತನೆ ಬಗ್ಗೆ ಸಂಪುಟದಲ್ಲಿ ಚರ್ಚೆ ನಡೆಯಿತಲ್ಲದೆ, ಕಾಂಗ್ರೆಸ್ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಲು ರಾಜಭವನವನ್ನುದುರುಪಯೋಗಮಾಡಿಕೊಳ್ಳಲಾಗುತ್ತಿದೆ ಎಂಬ ಆರೋಪ ಕೇಳಿಬಂದಿತು.

ಪಶ್ಚಿಮ ಬಂಗಾಳ, ಕೇರಳ ಸೇರಿದಂತೆ ಅನೇಕ ರಾಜ್ಯಗಳಲ್ಲಿ ರಾಜಭವನವನ್ನು ದುರುಪಯೋಗ ಮಾಡಿಕೊಳ್ಳುತ್ತಿರುವಂತೆ ಕರ್ನಾಟಕಕ್ಕೂ ಕೈಹಾಕಲಾಗಿದೆ.

ಈ ವಿಷಯದಲ್ಲಿ ಇಡೀ ಸರ್ಕಾರ ಒಗ್ಗಟ್ಟಾಗಿ ಕೇಂದ್ರದ ನೀತಿಯನ್ನು ವಿರೋಧಿಸಬೇಕು, ರಾಜ್ಯಪಾಲರು ನೀಡಿರುವ ನೋಟಿಸ್ ಹಿಂಪಡೆಯದಿದ್ದರೆ ಕಾನೂನು ಹೋರಾಟ ನಡೆಸಲು ಸಭೆ ತೀರ್ಮಾನಿಸಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಅಡ್ವೋಕೇಟ್ ಜನರಲ್ ಹಾಗೂ ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ನೀಡಿರುವ ವರದಿ ಬಗ್ಗೆ ಸಂಪುಟದಲ್ಲಿ ವಿಸ್ತೃತ ಚರ್ಚೆ ನಡೆಸಲಾಯಿತು.

ರಾಜ್ಯಪಾಲರ ಪತ್ರಕ್ಕೆ ಉತ್ತರ ನೀಡಿ, ಪತ್ರವನ್ನು ಹಿಂಪಡೆಯುವಂತೆ, ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಪೂರ್ಣ ಮಾಹಿತಿ ಒದಗಿಸಲು ತೀರ್ಮಾನಿಸಲಾಯಿತು.

ಪ್ರತಿಪಕ್ಷ ಬಿಜೆಪಿ ಶಾಸಕರು ಮತ್ತು ಖಾಸಗಿ ವ್ಯಕ್ತಿಯೊಬ್ಬರು ನೀಡಿರುವ ದೂರಿನ ಆಧಾರದ ಮೇಲೆ ರಾಜ್ಯಪಾಲರು ಇಂತಹ ನಿರ್ಣಯಕ್ಕೆ ಬಂದಿದ್ದಾರೆ ಎಂದು ಸಭೆ ಅಭಿಪ್ರಾಯಪಟ್ಟಿತು.

ರಾಜ್ಯಪಾಲರ ನೋಟಿಸ್ ಸಂಪೂರ್ಣ ರಾಜಕೀಯ ಪ್ರೇರಿತವಾಗಿದೆ, ಇದಕ್ಕೆ ಸರ್ಕಾರ ಮಾನ್ಯತೆ ನೀಡುವ ಅಗತ್ಯವಿಲ್ಲ ಎಂಬ ನಿಲುವನ್ನು ಸಭೆ ವ್ಯಕ್ತಪಡಿಸಿತು.

ಸಚಿವ ಸಂಪುಟ ಸಭೆಗೂ ಮುನ್ನ ಮುಖ್ಯಮಂತ್ರಿ ಅವರ ಸರ್ಕಾರಿ ನಿವಾಸ ಕಾವೇರಿಯಲ್ಲಿ ನಡೆದ ಉಪಹಾರ ಕೂಟದಲ್ಲೂ ಸಿದ್ದರಾಮಯ್ಯ ಅವರು, ತಮ್ಮ ಸಂಪುಟದ ಸಹೋದ್ಯೋಗಿಗಳೊಂದಿಗೆ ಮುಡಾ ಹಗರಣಕ್ಕೆ ಸಂಬಂಧಿಸಿದ ಮಾಹಿತಿ ಹಂಚಿಕೊಂಡರು.

ರಾಜ್ಯಪಾಲರು ಉದ್ದೇಶ ಪೂರ್ವಕವಾಗಿ ನೋಟಿಸ್ ನೀಡಿದ್ದಾರೆ, ರಾಜಭವನವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಸಿದ್ದರಾಮಯ್ಯ ಆರೋಪಿಸಿದರು.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನೇ ಖುದ್ದಾಗಿ ರಾಜ್ಯಪಾಲರನ್ನು ಭೇಟಿ ಮಾಡಿ ಎಲ್ಲಾ ದಾಖಲೆಗಳನ್ನು ನೀಡಿದರೂ ದುರುದ್ದೇಶ ಪೂರ್ವಕವಾಗಿ ನೋಟಿಸ್ ನೀಡಿದ್ದಾರೆ.

ಒಂದು ವೇಳೆ ಹಗರಣವನ್ನು ಪ್ರಾಸಿಕ್ಯೂಷನ್‌ಗೆ ನೀಡಿದರೆ, ಕಾನೂನು ಹೋರಾಟ ನಡೆಸೋಣ ಎಂದು ಮುಖ್ಯಮಂತ್ರಿ ಅವರು ಹೇಳಿದ್ದಕ್ಕೆ ಸಚಿವರು ಸಹಮತ ವ್ಯಕ್ತಪಡಿಸಿದ್ದಾರೆ.

ಈ ವಿಷಯದಲ್ಲಿ ಕಾಂಗ್ರೆಸ್ ವರಿಷ್ಠರು ನನ್ನ ಪರ ಇದ್ದಾರೆ, ಕಳೆದ ಎರಡು ದಿನಗಳ ಹಿಂದೆ ತಾವು ದೆಹಲಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಅಧಿನಾಯಕ ರಾಹುಲ್ ಗಾಂಧಿ, ಪ್ರಧಾನಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರಿಗೆ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ನೀಡಿದ್ದೇನೆ.

ತಾವು ಯಾವುದೇ ರೀತಿಯ ಅಕ್ರಮ ಎಸಗಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದೇನೆ, ಸದ್ಯದ ಬೆಳವಣಿಗೆ ಬಗ್ಗೆ ರಾಹುಲ್ ಗಾಂಧಿ ಬೇಸರಗೊಂಡರಲ್ಲದೆ, ಕಾನೂನು ಹೋರಾಟ ನಡೆಸಿ ಎಂದು ತಿಳಿಸಿದ್ದಾರೆ.

ಕಾನೂನು ಹೋರಾಟದಲ್ಲಿ ಯಶಸ್ವಿಯಾಗಿ ಬರುತ್ತೇನೆ ಎಂದು ಮುಖ್ಯಮಂತ್ರಿ ಸಭೆಗೆ ತಿಳಿಸಿದ್ದಾರೆ.

ಬಿಜೆಪಿಯೇತರ ಆಡಳಿತ ಇರುವ ರಾಜ್ಯಗಳಲ್ಲಿ ಮಾಡಿದಂತೆ ಕರ್ನಾಟಕದಲ್ಲೂ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ನಡೆದಿದೆ, ಅನೇಕ ರಾಜ್ಯಗಳಲ್ಲಿ ರಾಜಭವನವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ.

ಬಿಜೆಪಿ ವಿರುದ್ಧ ಹೋರಾಟ ತೀವ್ರಗೊಳಿಸಬೇಕು, ಕೇಂದ್ರದ ಯತ್ನ ವಿಫಲಗೊಳಿಸಲು ತೀವ್ರ ಹೋರಾಟ ನಡೆಸೋಣ ಎಂದು ಮುಖ್ಯಮಂತ್ರಿ ತಿಳಿಸಿದ್ದಲ್ಲದೆ, ರಾಜಕೀಯವಾಗಿ ಅಷ್ಟೇ ಅಲ್ಲದೆ, ಕೇಂದ್ರದ ನೀತಿಗಳ ವಿರುದ್ಧವೂ ಕಾನೂನಾತ್ಮಕ ಹೋರಾಟ ನಡೆಸುವ ತೀರ್ಮಾನ ತೆಗೆದುಕೊಳ್ಳೋಣ ಎಂದರು.

# ಹಮಾಸ್ ಸೈನಿಕ ವಿಭಾಗದ ಮುಖ್ಯಸ್ಥ ಹತ

ಜೆರುಸಲೇಂ, ಆ. 1 - ಹಮಾಸ್ ಸೈನಿಕ ವಿಭಾಗದ ಮುಖ್ಯಸ್ಥ ಮೊಹಮ್ಮದ್ ಡೀಫ್ ಕಳೆದ ಜುಲೈನಲ್ಲಿ ಗಾಜಾದಲ್ಲಿ ನಡೆದ ವೈಮಾನಿಕ ದಾಳಿಯಲ್ಲಿ ಹತನಾಗಿರುವುದಾಗಿ ಇಸ್ರೇಲ್ ಸೈನ್ಯ ತಿಳಿಸಿದೆ.

ಜುಲೈ 13ರಂದು ಗಾಜಾ ನಗರದ ಮೇಲೆ ಇಸ್ರೇಲ್ ನಿಖರ ದಾಳಿ ನಡೆಸಿತ್ತು. ಈ ದಾಳಿಯಲ್ಲಿ ಡೀಫ್ ಹತನಾಗಿರುವುದು ಖಚಿತವಾಗಿದೆ ಎಂದು ಇಸ್ರೇಲ್ ತಿಳಿಸಿದೆ.

ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ನಡೆಸಲಾದ ದಾಳಿಯ ಸಂಚನ್ನು ಡೀಫ್ ರೂಪಿಸಿದ್ದ ಎಂದು ಇಸ್ರೇಲ್ ತಿಳಿಸಿತ್ತು.

# ನೀಟ್ : ಸಿ.ಬಿ.ಐ.ನಿಂದ ಮೊದಲ ಆರೋಪ ಪಟ್ಟಿ

ನವದೆಹಲಿ, ಆ. 1 - ನೀಟ್ - ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿ.ಬಿ.ಐ. 13 ಜನರ ವಿರುದ್ಧ ಮೊದಲ ಆರೋಪ ಪಟ್ಟಿ ದಾಖಲಿಸಿದೆ. ಪಾಟ್ನಾದ ಸಿಬಿಐ ನ್ಯಾಯಾಲಯದ ಎದುರು ಆರೋಪ ಪಟ್ಟಿ ದಾಖಲಿಸಲಾಗಿದೆ. ಜೂನ್ 23ರಂದು ಸಿ.ಬಿ.ಐ. ಈ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡಿತ್ತು.

# ಧರ್ಮಸ್ಥಳದ ಜನಪರ ಕಾರ್ಯಕ್ರಮ ಮಾದರಿ



ಮಲೆಬೆನ್ನೂರು, ಆ. 1- ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಡಾ. ವೀರೇಂದ್ರ ಹೆಗ್ಗಡೆ ಅವರು ಜಾರಿಗೊಳಿಸಿರುವ ಜನಪರ ಕಾರ್ಯಕ್ರಮಗಳು ದೇಶಕ್ಕೇ ಮಾದರಿಯಾಗಿವೆ ಎಂದು ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಹೆಚ್.ಎಸ್. ಮಂಜುನಾಥ್ ಮೆಚ್ಚುಗೆ ವ್ಯಕ್ತ ಪಡಿಸಿದರು.

ಅವರು ಬುಧವಾರ ಕೊಮಾರನಹಳ್ಳಿ ಗ್ರಾಮದ ಶ್ರೀ ಲಕ್ಷ್ಮಿ ರಂಗನಾಥ್ ಸ್ವಾಮಿ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ಸುಜ್ಞಾನ ನಿಧಿ ಶಿಷ್ಯ ವೇತನ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕರು ಮಕ್ಕಳಿಗೆ ಶಿಕ್ಷೆ ನೀಡುವುದು ಶಿಕ್ಷಣ ಕಲಿಯಲಿ ಎಂಬ ಉದ್ದೇಶದಿಂದ ಎಂಬುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕು. ಪ್ರತಿಫಲ ಅಪೇಕ್ಷಿಸದೇ ಸೇವೆ ಸಲ್ಲಿಸುವವರು ಶಿಕ್ಷಕರು ಮಾತ್ರ. ಅಂತಹ ಶಿಕ್ಷಕರ ಬಗ್ಗೆ ಗೌರವ ಬೆಳೆಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ, ಪೋಷಕರಿಗೆ ಕಿವಿ ಮಾತು ಹೇಳಿದ ಮಂಜುನಾಥ್ ಅವರು, ಗ್ರಾಮೀಣ ಪ್ರದೇಶದಲ್ಲಿ ಓದಿದವರೇ ದೇಶದಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ ಎಂದರು.

ಧರ್ಮಸ್ಥಳ ಯೋಜನೆಯ ಜಿಲ್ಲಾ ನಿರ್ದೇಶಕ ಎಂ ಲಕ್ಷ್ಮಣ ಮಾತನಾಡಿ, ದಾವಣಗೆರೆ ಜಿಲ್ಲೆಯಲ್ಲಿ ಈ ವರ್ಷ 1,689 ವಿದ್ಯಾರ್ಥಿಗಳಿಗೆ ಮತ್ತು

**ಕೊಮಾರನಹಳ್ಳಿ** ಮಲೇಬೆನ್ನೂರು ಯೋಜನಾಧಿಕಾರಿ ಕಛೇರಿ ವ್ಯಾಪ್ತಿಯಲ್ಲಿ 140 ವಿದ್ಯಾರ್ಥಿಗಳಿಗೆ ಶಿಷ್ಯವೇತನದ ಮಂಜೂರಾತಿ ಪತ್ರ ವಿತರಿಸಲಿದ್ದೇವೆ ಎಂದು ಎಂ. ಲಕ್ಷ್ಮಣ ತಿಳಿಸಿದರು.

ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಎ.ಎಸ್.ಪಿ ಶ್ರೀನಿವಾಸ್, ಪೊಲೀಸ್ ಸಿಬ್ಬಂದಿ ಸಂತೋಷ್, ಜಿಲ್ಲಾ ಜನ ಜಾಗೃತಿ ವೇದಿಕೆ ಸದಸ್ಯ ವೆಂಕಟರಾಮಾಂಜನೇಯ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಹಾಗೂ ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ಮಾತನಾಡಿದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಜಿಗಳಿ ಪ್ರಕಾಶ್, ಕೊಕ್ಕನೂರಿನ ಹನುಮಂತರಾಯ, ಯೋಜನಾಧಿಕಾರಿ ವಸಂತ್, ಸಿ.ಎಸ್.ಇ ನೋಡಲ್ ಅಧಿಕಾರಿ ಚಿನ್ನಮೂರ್ತಿ, ಕಛೇರಿ ವ್ಯವಸ್ಥಾಪಕರಾದ ಐಶ್ವರ್ಯ, ವಲಯ ಮೇಲ್ವಿಚಾರಕರಾದ ರಕ್ಷಿತ, ರಂಜಿತ, ಸಂಪನ್ಮೂಲ ವ್ಯಕ್ತಿ ಸದಾನಂದ್, ಮುಖಂಡರಾದ ಕುಂಬಳೂರು ವಾಸು, ಮಲ್ಲನಾಯ್ಕನಹಳ್ಳಿ ಅಶೋಕ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಭದ್ರಾ ಬಗ್ಗೆ ಭಯಬೇಡ, ಅದು ಕನಸಾಗಿ ಉಳಿಯಲಿದೆ

**(1ನೇ ಪುಟದಿಂದ)** ಅವರು ಕಳೆದ ಅನೇಕ ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಅವರ ಹೋರಾಟದ ಫಲವಾಗಿ ನಾವು-ನೀವೆಲ್ಲರೂ ಇಲ್ಲಿಗೆ ಬರುವಂತಾಗಿದೆ. ಬಿ.ಎಸ್.ಯಡಿಯೂರಪ್ಪ ಅವರು ಸಿಎಂ ಆಗಿದ್ದಾಗ ರವೀಂದ್ರನಾಥ್ ಅವರ ನೇತೃತ್ವದಲ್ಲಿ ಒತ್ತಡ ಹಾಕಿ, ಭದ್ರಾ ನಾಲೆಗಳ ಆಧುನೀಕರಣಕ್ಕೆ 900 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿ ಕೆಲಸ ಮಾಡಿಸಿದ್ದರಿಂದ ನಾಲೆಗಳಲ್ಲಿ ನೀರು ಹರಿಯುತ್ತಿದೆ. ಆದರೆ, ಈಗಿನ ಸರ್ಕಾರ ಕಾಲುವೆಗಳಲ್ಲಿ ತುಂಬಿಕೊಂಡಿರುವ ಹೂಳನ್ನೂ ಸಹ ತೆಗೆಸಲು ಅನುದಾನ ನೀಡದೇ ರೈತರಿಗೆ ತೊಂದರೆ ಕೊಟ್ಟಿದೆ. ಕಾಲುವೆಗಳಲ್ಲಿ ಹೂಳು ತುಂಬಿಕೊಂಡು ನೀರು ಮುಂದಕ್ಕೆ ಹೋಗದ ಪರಿಸ್ಥಿತಿ ನಿರ್ಮಾಣವಾಗಿದ್ದು, ಕಚೇರಿಗಳಲ್ಲಿ ಇಂಜಿನಿಯರ್‌ಗಳಿಲ್ಲ. ಸುಳ್ಳು ಭರವಸೆ ನೀಡಿ, ಅಧಿಕಾರಕ್ಕೆ ಬಂದಿರುವ ಈ ಸರ್ಕಾರದಲ್ಲಿ ಒಂದೂ ಅಭಿವೃದ್ಧಿ ಕೆಲಸ ಆಗಿಲ್ಲ. ಇಂತಹ ಕೆಟ್ಟ ಸರ್ಕಾರ ಬಹಳ ದಿನ ಅಧಿಕಾರದಲ್ಲಿ ಇರುವುದಿಲ್ಲ ಎಂದು ರೇಣುಕಾಚಾರ್ಯ ಭವಿಷ್ಯ ನುಡಿದರು.

ಚನ್ನಗಿರಿ ಕ್ಷೇತ್ರದ ಬಿಜೆಪಿ ಮುಖಂಡ ಮಾಡಾಳ್ ಮಲ್ಲಿಕಾರ್ಜುನ್ ಮಾತನಾಡಿ, ಭದ್ರಾ ಮೇಲ್ದಂಡೆ ಯೋಜನೆಗೆ ಪೂರ್ತಿ ನೀರನ್ನು ತುಂಗಾದಿಂದಲೇ ಲಿಫ್ಟ್ ಮಾಡುವಂತಾಗಬೇಕು ಮತ್ತು ಭದ್ರಾ ಡ್ಯಾಮ್ ಸುರಕ್ಷತೆ ಬಗ್ಗೆ ಸರ್ಕಾರ ನಿಗಾವಹಿಸಿ, ತಂತ್ರಜ್ಞರನ್ನು ಕರೆಸಿ ಪರೀಕ್ಷೆ ಮಾಡಿಸಬೇಕೆಂದರು.

ಹರಿಹರ ಕ್ಷೇತ್ರದ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಭದ್ರಾ ಕಾಲುವೆಗಳಲ್ಲಿ ತುಂಬಿಕೊಂಡಿರುವ ಹೂಳು ತೆಗೆಸಲು ಸರ್ಕಾರ ತಕ್ಷಣ ಮುಂದಾಗುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ಮಾತನಾಡಿ, ಭದ್ರಾ ಡ್ಯಾಮ್ ಬಗ್ಗೆ ಈಗ ಎಲ್ಲರಿಗೂ ಗೊತ್ತಾಗಿದ್ದು, ಡ್ಯಾಮ್‌ನಲ್ಲಿ ಎಷ್ಟು ಟಿಎಂಸಿ ನೀರಿದೆ ಎಂಬ ಬಗ್ಗೆಯೂ ನಮ್ಮ ರೈತರು ತಿಳಿದುಕೊಂಡಿದ್ದಾರೆ. ಇದಕ್ಕಾಗಿ ನಾನು ಮತ್ತು ನರಸಿಂಹಪ್ಪ ಅವರು 50 ವರ್ಷ ಹೋರಾಟ ಮಾಡುತ್ತಾ, ದಾವಣಗೆರೆ ಜಿಲ್ಲೆ ಜನರಿಗೆ ಭದ್ರಾ ಡ್ಯಾಮ್ ತೋರಿಸಿದ್ದೇವೆ. ಡ್ಯಾಮ್ ತುಂಬಿರುವುದು ಖುಷಿ ತಂದಿದೆ. ಅಪ್ಪರ್ ಭದ್ರಾ ವಿಚಾರದಲ್ಲಿ ನಾವೆಲ್ಲರೂ ಪಕ್ಷಾತೀತವಾಗಿ ಒಗ್ಗಟ್ಟಾಗಿರಬೇಕೆಂದು ಕರೆ ನೀಡಿದರು.

ದಾವಣಗೆರೆ ಉತ್ತರ ಕ್ಷೇತ್ರದ ಮುಖಂಡ ಲೋಕಿಕೆರೆ ನಾಗರಾಜ್, ಬಿಜೆಪಿ ಮುಖಂಡ ಕೊಳೇನಹಳ್ಳಿ ಸತೀಶ್ ಮಾತನಾಡಿದರು.

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಬಸವರಾಜ ನಾಯ್ಕ, ವಿಧಾನ ಪರಿಷತ್ ಮಾಜಿ ಸದಸ್ಯ ಡಾ. ಎ. ಹೆಚ್.ಶಿವಯೋಗಿ ಸ್ವಾಮಿ, ಮಾಜಿ ಮೇಯರ್ ಬಿ.ಜಿ.ಅಜಯ್‌ಕುಮಾರ್, ಬಿಜೆಪಿ ಮುಖಂಡ ಎಲ್. ಎನ್.ಕಲ್ಲೇಶ್, ದೂಡಾ ಮಾಜಿ ಅಧ್ಯಕ್ಷ ಕೆ.ಎಂ. ಸುರೇಶ್, ಭದ್ರಾವತಿ ಕ್ಷೇತ್ರದ ಬಿಜೆಪಿ ಮುಖಂಡ ಮಂಗೋಟೆ ರುದ್ರಪ್ಪ, ಜಿ.ಪಂ. ಮಾಜಿ ಅಧ್ಯಕ್ಷರಾದ ಪ್ರೇಮಾ ಲೋಕೇಶ್ವರಪ್ಪ, ಮಾಜಿ ಮೇಯರ್ ಗುರುನಾಥ್, ಸಂಗನಗೌಡ, ಕುಬೇರಪ್ಪ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಕಡ್ಲೇಬಾಳು ಧನಂಜಯ, ಅನಿಲ್‌ನಾಯ್ಕ, ಐರಣಿ ಅಣ್ಣಪ್ಪ, ಮಂಗೇನಹಳ್ಳಿ ಲೋಹಿತ್, ಯಲವಟ್ಟಿ ಯೋಮಕೇಶ್ವರಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಾಡಾ ಪ್ರಕಾಶ್, ಶಿರಮಗೊಂಡನಹಳ್ಳಿಯ ಎಸ್.ಎ.ವಿಜಯಕುಮಾರ್, ಎ.ಬಿ.ಕರಿಬಸಪ್ಪ, ಜಿ. ಗುಡ್ಡಪ್ಪ, ದೀಟೂರು ನಿರಂಜನ್, ಕುಣೆಬೆಳಕೆರೆ ಮಲ್ಲೇಶಪ್ಪ, ಬೇವಿನಹಳ್ಳಿ ಮಹೇಶ್ವರಪ್ಪ, ಕೊಮಾರನಹಳ್ಳಿಯ ಮಡಿವಾಳರ ಬಸವರಾಜ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ಜಿ.ಎಂ. ಸಿದ್ದೇಶ್ವರ ಅವರಿಗೆ ಕ್ಷೇತ್ರದ ಜನರೇ ಪಾಠ ಕಲಿಸಿದ್ದಾರೆ

ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಅಧಿಕಾರದಲ್ಲಿದ್ದಾಗ ಅಪ್ಪರ್ ಭದ್ರಾ ಬಗ್ಗೆ ಏನೂ ಮಾಡಲಿಲ್ಲ. ಈಗ ಅಪ್ಪರ್ ಭದ್ರಾ ಯೋಜನೆಗೆ ತುಂಗಾ ನೀರು ಹರಿಸಿ ಎಂದಿದ್ದಾರೆ ಎಂದು ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಶಾಮನೂರು ಹೆಚ್.ಆರ್.ಲಿಂಗರಾಜ್ ಲೇವಡಿ ಮಾಡಿದರು. 4 ಸಲ ಎಂಪಿ ಆಗಿದ್ದರೂ ಏನೂ ಕೆಲಸ ಮಾಡಲಿಲ್ಲ. ಒಂದೂ ರಸ್ತೆಯನ್ನು ಅಭಿವೃದ್ಧಿ ಪಡಿಸಲಿಲ್ಲ. ಕೇಂದ್ರದ ಹಣವನ್ನು ಭೀಮಸಮುದ್ರಕ್ಕೆ ತೆಗೆದುಕೊಂಡು ಹೋಗಿ ರಸ್ತೆ ಮಾಡಿಸಿಕೊಂಡಿರುವ ಸಿದ್ದೇಶ್ವರ ಅವರಿಗೆ ಕ್ಷೇತ್ರದ ಜನರೇ ಪಾಠ ಕಲಿಸಿದ್ದಾರೆ.

ಯಡಿಯೂರಪ್ಪ, ರವೀಂದ್ರನಾಥ್, ರೇಣುಕಾಚಾರ್ಯ ಮೋಸ ಮಾಡಿದ್ದಾರೆಂದು ಸುಳ್ಳು ಆರೋಪ ಮಾಡುವವರು ಅವರವರ ಕ್ಷೇತ್ರದಲ್ಲಿ ಬಿಜೆಪಿಗೆ ಎಷ್ಟು ಲೀಡ್ ಕೊಟ್ಟಿದ್ದಾರೆ ? ಹರಿಹರ ಕ್ಷೇತ್ರದಲ್ಲಿ ಹರೀಶ್, ಶಿವಶಂಕರ್, ವೀರೇಶ್ ಇದ್ದರೂ ಬಿಜೆಪಿಗೆ ಲೀಡ್ ಕೊಟ್ಟಿಲ್ಲ. ದಾವಣಗೆರೆ ಉತ್ತರದಲ್ಲಿ ಬಿಜೆಪಿ ಲೀಡ್ ಬಂದಿದೆ.

ನೂತನ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ಕ್ಷೇತ್ರದ ಸಮಸ್ಯೆಗಳ ಕುರಿತು ಅಧಿಕಾರಿಗಳ ಜೊತೆ ಸಭೆ ನಡೆಸಿದ್ದಾರೆ. ಜೊತೆಗೆ ಕೇಂದ್ರ ಸಚಿವರನ್ನೂ ಭೇಟಿ ಮಾಡಿ ಅನುದಾನಕ್ಕೆ ಮನವಿ ಮಾಡಿದ್ದಾರೆ ಎಂದು ಶಾಮನೂರು ಲಿಂಗರಾಜ್ ಮೆಚ್ಚುಗೆ ವ್ಯಕ್ತಪಡಿಸಿದರು.

## ಭದ್ರೆಯು ಬಂದಳು

ಹರಿದಳು ಭದ್ರೆ,
ತಾಯೊಡಲಿಂದ ಮಕ್ಕಳೆಡೆಗೆ
ಅದೆಷ್ಟು ಸಂತಸ ಅವಳಿಗೆ
ತನ್ನ ಮಕ್ಕಳ ನಗು ಮೊಗವ ಕಂಡು

ಹಾಲ್ನೊರೆಯಂತೆ ಧುಮುಕಿಹಳು
ವಯ್ಯಾರದಿ ಕುಣಿದು ಜಿಗಿದು
ಕರುಳ ಕುಡಿಗಳ ಜೀವಗಳ ಬದುಕಿಸಲು
ಹಾತೊರೆದು ಹರಿದು ಬರುತಿಹಳು

ತಾಯಿ ಭದ್ರೆಗೆ ಕಾದಿರುವ ಮಕ್ಕಳು
ಕರ ಮುಗಿದು ಶಿರ ಬಾಗಿ ಸ್ವಾಗತಿಸಿ
ಕುಣಿದು ಕುಪ್ಪಳಿಸಿಹರು
ಸಂಜೀವಿನಿ ಧರಣಿ ಸೇರಿದ ಸಂತಸಕೆ

ಬಣಗುಡುತ್ತಿದ್ದ ಕಾಲುವೆಗಳು
ಮೈದುಂಬಿ ಹಾಡುತ್ತಿವೆ ಜುಳು ಜುಳು ನಾದವ
ಯಾರ ಅಂಕುಶವಿಲ್ಲದೆ
ಮತ್ಸ್ಯಗಳು ನರ್ತನಕೆ ಸಿದ್ದವಾಗಿವೆ

ಭದ್ರೆಯ ಸ್ಪರ್ಶವಾಗುತ್ತಲೇ
ಧರಣಿ ಹಸಿರು ಶೃಂಗಾರಗೊಂಡಿಹಳು
ಎತ್ತ ನೋಡಿದರತ್ತ ಕಣ್ಣಾಡಿಸಿದಷ್ಟೂ ದೂರ
ಹಚ್ಚ ಹಸಿರಿನ ಬಣ್ಣದೋಕುಳಿಯೇ ರಾಚುತ್ತಿದೆ

ರೈತರ ಕಣ್ಣಲ್ಲಿ ಆನಂದ ಭಾಷ್ಪ
ಭದ್ರೆಗಿದೋ ಭಕ್ತಿಯ ಪುಷ್ಪ
ರೈತನ ಕಷ್ಟ ನೀಗಿತು ನೋಡು
ತಾಯಿ ಭದ್ರೆಯು ನಾಲೆಗೆ ಸೇರಿದಾ ಕ್ಷಣ

ಚುರುಕಾಯಿತು ನೋಡು
ಉತ್ತು ಭಿತ್ತುವ ಕಲಸ
ರೈತನಿಗಿಲ್ಲ ಇನ್ನು
ಬಿಡುವೆನ್ನುವ ದಿವಸ

**- ಅಣಬೇರು ತಾರೇಶ್ ಕೆ.ಪಿ.**
ದಾವಣಗೆರೆ, 9611969690

# ಹಿಂದೂಗಳಲ್ಲ ಎಂಬ ಹೇಳಿಕೆ ಹಾಸ್ಯಾಸ್ಪದ

**(1ನೇ ಪುಟದಿಂದ)** ಕಾರ್ಯಕ್ಕೆ ಮುಂದಾಗಿದ್ದಾರೆ.

ವೀರಶೈವರು, ಲಿಂಗಾಯತರು ನಾವೆಲ್ಲರೂ ಹಿಂದೂವಿನ ಒಂದು ಭಾಗವಾಗಿದ್ದು, ವಿಶಾಲವಾದ ವೃಕ್ಷದ ಒಂದು ಟೊಂಗೆ ಇದ್ದಂತೆ. ಲಿಂಗಾಯತರು, ಜೈನರು, ಸಿಕ್ಕರು ಹಿಂದೂಗಳೇ, ಅದರಂತೆ ವೀರಶೈವ ಲಿಂಗಾಯತರು ಹಿಂದೂಗಳು. ಆದರೆ ಅಲ್ಪ ಜ್ಞಾನಿಗಳು, ಆಳವಾಗಿ ಅಧ್ಯಯನ ಮಾಡದೇ ಇರುವವರು ಮತ್ತು ಸಮಾಜದ ಬಗ್ಗೆ ಅನುಭವ ಇಲ್ಲದವರು ಸಮಾಜದಲ್ಲಿ ಗೊಂದಲವನ್ನು ಉಂಟುಮಾಡುತ್ತ ಸಾಗಿದ್ದಾರೆ.

ಬಸವಣ್ಣನವರಹತ್ತಿರಇದ್ದಿದ್ದು,ಗುಣಾಕಾರವೇ ಹೊರತು ಭಾಗಕಾರ ಅಲ್ಲ ಮತ್ತು ಬಸವಣ್ಣನವರು ಹೇಳಿದ್ದು ವ್ಯವಕಲನವಲ್ಲ ಅದು ಸಂಕಲನ ಹಾಗಾಗಿ ನಾವೆಲ್ಲರೂ ಒಂದು ಎಂಬ ಭಾವದಲ್ಲಿ ಹೋಗಬೇಕು. ನಾವು ಬಸವ ತತ್ವ ಆರಾಧನೆ ಮಾಡುತ್ತಿದ್ದೇವೆ ಅಂದರೆ ಅಕ್ಕಮಹಾದೇವಿ ಭಕ್ತನ ಮುಖದ ದರ್ಪಣದಲ್ಲಿ ಲಿಂಗವನ್ನು ಕಾಣಬೇಕು ಎಂದರು. ನಾವು ಗೊಂದಲ ಮಾಡಿಕೊಳ್ಳಬಾರದು, ಎಲ್ಲರೂ ಒಂದೇ ಎಂಬ ಭಾವದಲ್ಲಿ ಸಾಗಿ ಜೋಡಿಸುವ ನಿಟ್ಟಿನಲ್ಲಿ ಪರಿವರ್ತನೆ ಆಗಬೇಕು ಎಂದು ಹೇಳಿದರು.

# ಭೂಕುಸಿತ : ವಿಜ್ಞಾನಿಗಳ ನಿರ್ಬಂಧದ ಆದೇಶಕ್ಕೆ ತಡೆ

ತಿರುವನಂತಪುರಂ, ಅ. 1 - ಕೇರಳದ ವಿಜ್ಞಾನಿಗಳು ಹಾಗೂ ವಿಜ್ಞಾನ ಸಂಸ್ಥೆಗಳು ವಯನಾಡ್ ಭೂ ಕುಸಿತದ ಬಗ್ಗೆ ಹೇಳಿಕೆ ನೀಡಬಾರದು ಎಂದು ಹೊರಡಿಸಲಾಗಿದ್ದ ನಿರ್ದೇಶನವನ್ನು ವಾಪಸ್ ಪಡೆಯುವಂತೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿಳಿಸಿದ್ದಾರೆ. ರಾಜ್ಯ ವಿಕೋಪ ನಿರ್ವಹಣಾ ಪ್ರಾಧಿಕಾರವು ನಿರ್ದೇಶನ ಒಂದನ್ನು ನೀಡಿ, ವಿಕೋಪ ಪೀಡಿತ ಪ್ರದೇಶಗಳಿಗೆ ವಿಜ್ಞಾನಿಗಳು ಹಾಗೂ ವಿಜ್ಞಾನ ಸಂಸ್ಥೆಗಳು ಭೇಟಿ ನೀಡಬಾರದು. ವಿಕೋಪದ ಬಗ್ಗೆ ಯಾವುದೇ ಹೇಳಿಕೆ ನೀಡಬಾರದು ಎಂದು ತಿಳಿಸಿತ್ತು. ಈ ನಿರ್ದೇಶನವು ತೀವ್ರ ಆಕ್ಷೇಪಕ್ಕೆ ಕಾರಣವಾದ ನಂತರ ಕೇರಳ ಮುಖ್ಯಮಂತ್ರಿ ಮಧ್ಯ ಪ್ರವೇಶಿಸಿದ್ದಾರೆ.

# ಹಿಮಾಚಲ : ಮೇಘ ಸ್ಫೋಟಗಳಿಂದ 4 ಸಾವು

ಶಿಮ್ಲಾ, ಆ. 1 - ಹಿಮಾಚಲ ಪ್ರದೇಶದಲ್ಲಿ ಸಂಭವಿಸಿದ ಮೇಘ ಸ್ಫೋಟಗಳಿಗೆ ಸಿಲುಕಿ ನಾಲ್ವರು ಸಾವನ್ನಪ್ಪಿದ್ದಾರೆ ಹಾಗೂ 50 ಜನ ಕಾಣೆಯಾಗಿದ್ದಾರೆ. ಮೇಘ ಸ್ಫೋಟಗಳಿಂದ ಹಲವಾರು ಮನೆಗಳು, ಸೇತುವೆ ಹಾಗೂ ರಸ್ತೆಗಳು ಕೊಚ್ಚಿ ಹೋಗಿವೆ. ಶಿಮ್ಲಾ ಜಿಲ್ಲೆಯ ನಿರಂದ್, ಸೈಂಜ್ ಹಾಗೂ ಮಲನ ಪ್ರದೇಶಗಳಲ್ಲಿ ಮೇಘ ಸ್ಫೋಟಗಳು ಉಂಟಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕುಲು ಜಿಲ್ಲೆಯಲ್ಲಿ ಸಂಭವಿಸಿದ ಮೇಘ ಸ್ಫೋಟದ ನಂತರ ಏಳು ಜನ ಕಣ್ಮರೆಯಾಗಿದ್ದಾರೆ.


# ಕೃಷ್ಣ ಜನ್ಮಭೂಮಿ -ಶಾಹಿ ಈದ್ಗಾ ವಿವಾದದ ವಿಚಾರಣೆಗೆ ಸಹಮತ

ಪ್ರಯಾಗರಾಜ್, ಆ. 1 - ಮಥುರಾದ ಕೃಷ್ಣ ಜನ್ಮಭೂಮಿ – ಶಾಹಿ ಈದ್ಗಾ ವಿವಾದಕ್ಕೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯು ಮುಂದುವರೆಯಲು ಯಾವ ಅಡ್ಡಿಯೂ ಇಲ್ಲ ಎಂದು ಅಲಹಾಬಾದ್ ಹೈಕೋರ್ಟ್ ತಿಳಿಸಿದೆ. ವಿವಾದಕ್ಕೆ ಸಂಬಂಧಿಸಿದ ಅರ್ಜಿಗಳು ಪುರಸ್ಕಾರ ಯೋಗ್ಯವೇ ಎಂಬ ಪ್ರಶ್ನೆಯೊಂದಿಗೆ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಹಿಂದೂ ಅರ್ಜಿದಾರರು ಸಲ್ಲಿಸಿರುವ ಅರ್ಜಿಗಳು, ಕೃಷ್ಣ ಜನ್ಮಭೂಮಿ ದೇವಸ್ಥಾನದ ಪಕ್ಕದಲ್ಲಿ ಇರುವ ಶಾಹಿ ಈದ್ಗಾ ಮಸೀದಿಯನ್ನು ತೆರವುಗೊಳಿಸಬೇಕು ಎಂಬ ಕೋರಿಕೆಯನ್ನು ಹೊಂದಿವೆ. ಆದರೆ, ಈ ಅರ್ಜಿಗಳನ್ನು ವಿಚಾರಣೆಗೆ ಎತ್ತಿಕೊಳ್ಳಲು ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ – 1991ರ ಅಡಿಯಲ್ಲಿ ನಿರ್ಬಂಧ ಇದೆ ಎಂದು ಮಸೀದಿ ಸಮಿತಿ ವಾದಿಸಿತ್ತು.

ಶ್ರೀಕೃಷ್ಣ ಜನಿಸಿದ ಸ್ಥಳದಲ್ಲಿ ಇದ್ದ ದೇವಸ್ಥಾನವನ್ನು ಧ್ವಂಸಗೊಳಿಸಿದ ನಂತರದಲ್ಲಿ ಮಸೀದಿಯನ್ನು ನಿರ್ಮಿಸಲಾಗಿದೆ ಎಂಬುದು ಹಿಂದೂ ಅರ್ಜಿದಾರರ ವಾದಿಸಿದ್ದರು.


॥ ಶ್ರೀ ಕೊಟ್ಟೂರು ಬಸವೇಶ್ವರ ಪ್ರಸನ್ನ ॥



**ಕೈಲಾಸ ಸಮಾರಾಧನೆ ಆಹ್ವಾನ**

ದಾವಣಗೆರೆ ಹೊಂಡದ ಸರ್ಕಲ್ ವಾಸಿ **ಬಿ.ಚಂದ್ರಪ್ಪ** ಇವರು ಮಾಡುವ ವಿಜ್ಞಾಪನೆಗಳು.
ದಿ.: 25.07.2024ನೇ ಗುರುವಾರ ಬೆಳಿಗ್ಗೆ 9.15ಕ್ಕೆ ನಮ್ಮ ಮಾತೋಶ್ರೀಯವರಾದ
**ಶ್ರೀಮತಿ ದೀಟೂರು ಅಡಿವೆಮ್ಮ** (ದಿ. ಡಿ. ಬಸಪ್ಪ ಇವರ ಧರ್ಮಪತ್ನಿ)
ಇವರು ಶಿವಾಧೀನರಾದ ಪ್ರಯುಕ್ತ
**'ಕೈಲಾಸ ಸಮಾರಾಧನೆ'ಯನ್ನು**
ದಿ.: 02.08.2024ನೇ ಶುಕ್ರವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ ಹೊಂಡದ ಸರ್ಕಲ್ ಹತ್ತಿರದಲ್ಲಿರುವ ಸ್ವಕುಳಸಾಳಿ ಸಮಾಜದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖಿತಪ್ತರು : ಬಿ. ಚಂದ್ರಪ್ಪ ಹಾಗೂ ಬಿ. ಆನಂದ್ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಡಿ. ಬಸಪ್ಪ ಮತ್ತು ಮಕ್ಕಳು ಪುಸ್ತಕದ ವ್ಯಾಪಾರಿಗಳು, ಮಂಡಿಪೇಟೆ, ದಿಟೂರು ವಂಶಸ್ಥರು ಹಾಗೂ ಬಂಧು-ಮಿತ್ರರು.
ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ಭಾವಪೂರ್ಣ ಶ್ರದ್ಧಾಂಜಲಿ**



ವಿಶ್ವ ಭಾರತಿ ವಿದ್ಯಾಪೀಠ (ರಿ.) ದಾವಣಗೆರೆ ಸಂಸ್ಥಾಪಕರಾದ
**ಶ್ರೀಮತಿ ಜಾನಮ್ಮ ಕೆಂಗೋ**
ಇವರು ದಿನಾಂಕ : 01.08.2024 ರಂದು ನಿಧನರಾಗಿದ್ದು, ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.
**ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗ**
**ವಿಶ್ವ ಭಾರತಿ ವಿದ್ಯಾಪೀಠ ಪ್ರಾಥಮಿಕ ಮತ್ತು ಪ್ರೌಢಶಾಲೆ**
ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.


# ಜುಲೈನಲ್ಲಿ 1.82 ಲಕ್ಷ ಕೋಟಿ ರೂ. ಜಿಎಸ್‌ಟಿ ಸಂಗ್ರಹ

ನವದೆಹಲಿ, ಆ.1 - ಜುಲೈ ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹ ಶೇ.10.3ರಷ್ಟು ಹೆಚ್ಚಾಗಿ 1.82 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಜಿ.ಎಸ್.ಟಿ. ಜಾರಿಗೆ ಬಂದ ನಂತರ ಇದು ಮೂರನೇ ಅತಿ ಹೆಚ್ಚಿನ ತೆರಿಗೆ ಸಂಗ್ರಹವಾಗಿದೆ.

ಏಪ್ರಿಲ್ 2024ರಲ್ಲಿ ಜಿ.ಎಸ್.ಟಿ. ಸಂಗ್ರಹ ದಾಖಲೆಯ 2.10 ಲಕ್ಷ ಕೋಟಿ ರೂ.ಗಳಿಗೆ ತಲುಪಿತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ ಒಟ್ಟು 7.39 ಲಕ್ಷ ಕೋಟಿ ರೂ. ತೆರಿಗೆ ಸಂಗ್ರಹಿಸಲಾಗಿದೆ.

## ಉತ್ತರಾಖಂಡದಲ್ಲಿ ಮಳೆ : 12 ಸಾವು

ಡೆಹರಾಡೂನ್, ಆ. 1 - ಉತ್ತರಾಖಂಡದ ಹಲವೆಡೆ ಸುರಿದ ಧಾರಾಕಾರ ಮಳೆಯಿಂದಾಗಿ ಒಂದೇ ಕುಟುಂಬದ ಮೂವರು ಸೇರಿದಂತೆ 12 ಜನ ಸಾವನ್ನಪ್ಪಿದ್ದಾರೆ ಹಾಗೂ ಆರು ಜನ ಗಾಯಗೊಂಡಿದ್ದಾರೆ. ಹರಿದ್ವಾರದಲ್ಲಿ ಆರು, ತೆಹ್ರಿಯಲ್ಲಿ ಮೂವರು, ಡೆಹರಾಡೂನ್‌ನಲ್ಲಿ ಇಬ್ಬರು ಹಾಗೂ ಚಮೋಲಿಯಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ.

## ಚನ್ನಗಿರಿ: ಗಾಂಜಾ ಸೇವನೆ, ಬಂಧನ

ಚನ್ನಗಿರಿ, ಆ. 1 - ಪಟ್ಟಣದ ಸಂತೇ ಮೈದಾನದಲ್ಲಿ ಹಾಗೂ ಬಸ್ ನಿಲ್ದಾಣದಲ್ಲಿ ಇಬ್ಬರು ವ್ಯಕ್ತಿಗಳನ್ನು ಗಾಂಜಾ ಸೇವನೆ ಮಾಡಿರುವ ಅನುಮಾನದ ಮೇಲೆ ಪೊಲೀಸರು ಬಂಧಿಸಿದ್ದಾರೆ. ವೈದ್ಯಕೀಯ ವರದಿಯಲ್ಲಿ ಅವರು ಗಾಂಜಾ ಸೇವನೆ ದೃಢಪಟ್ಟಿದ್ದು, ಆರೋಪಿತರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

## ಮುನಾವರ್ ಸಾಬ್ ನಿಧನ



ದಾವಣಗೆರೆ ನಗರದ ಚಾಮರಾಜಪೇಟೆ ವಾಸಿ ಎಪಿಎಂಸಿ ದಲ್ಲಾಲಿ ವ್ಯಾಪಾರಿ ಜಗಳೂರು ಸಿ.ಕೆ. ಮುನಾವರ್ ಸಾಬ್ (80) ಅವರು ದಿನಾಂಕ 1.8.2024ರ ಗುರುವಾರ ರಾತ್ರಿ 9.30 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.8.2024ರ ಶುಕ್ರವಾರ ಪ್ರಾರ್ಥನೆಯ ನಂತರ ಮಧ್ಯಾಹ್ನ 2.30ಕ್ಕೆ ಪಿ.ಬಿ. ರಸ್ತೆಯಲ್ಲಿರುವ ಹಳೇ ಖಬರಸ್ತಾನದಲ್ಲಿ ಅಂತ್ಯಕ್ರಿಯೆ (ದಫನ್) ನೆರವೇರಲಿದೆ.

## ಟಿ.ಹೆಚ್.ಎಂ. ಜಯಮ್ಮ ನಿಧನ



ದಾವಣಗೆರೆ ಎಸ್. ಎಸ್. ಲೇಔಟ್ 'ಬಿ' ಬ್ಲಾಕ್ ನಿವಾಸಿ ಶ್ರೀಮತಿ ಟಿ.ಹೆಚ್.ಎಂ. ಜಯಮ್ಮ ಅವರು ದಿನಾಂಕ 31.07.2024 ರಂದು ಬೆಳಿಗ್ಗೆ 11.10 ಕ್ಕೆ ನಿಧನರಾದರು. ನಾಲ್ವರು ಸಹೋದರರು, ಓರ್ವ ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ. ಮೃತರ ಅಂತ್ಯಕ್ರಿಯೆಯನ್ನು ಅದೇ ದಿನ ಸಂಜೆ 6.00 ಗಂಟೆಗೆ ದಾವಣಗೆರೆಯ ಗ್ಲಾಸ್ ಹೌಸ್ ಬಳಿಯ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

# ಒಳಮೀಸಲಾತಿ: ರಾಜ್ಯಗಳಿಗೆ ಅಧಿಕಾರ

**(1ನೇ ಪುಟದಿಂದ)** ಮೀಸಲಾತಿಯ ಉಪ ವರ್ಗೀಕರಣಕ್ಕೆ ರಾಜ್ಯಗಳಿಗೆ ಅಧಿಕಾರ ಇದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರು 565 ಪುಟಗಳನ್ನು ತಾವೇ ಬರೆದಿದ್ದಾರೆ. ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರ, ಬಿ.ಆರ್. ಗವಾಯಿ, ವಿಕ್ರಮ್ ನಾಥ್, ಪಂಕಜ್ ಮಿತ್ತಲ್, ಸತೀಶ್ ಚಂದ್ರ ಮಿಶ್ರ ಹಾಗೂ ನ್ಯಾಯಮೂರ್ತಿ ಬೇಲಾ ಎಂ.ತ್ರಿವೇದಿ ಅವರು ಈ ತೀರ್ಪು ನೀಡಿದ ಪೀಠದಲ್ಲಿದ್ದಾರೆ. ಆದರೆ, ನ್ಯಾಯಮೂರ್ತಿ ಬೇಲಾ ತ್ರಿವೇದಿ ಅವರು ಭಿನ್ನಮತದ ತೀರ್ಪು ನೀಡಿದ್ದಾರೆ. ಇತರೆ ಐವರು ನ್ಯಾಯಮೂರ್ತಿಗಳು ಚಂದ್ರಚೂಡ್ ಬರೆದ ತೀರ್ಪಿನಲ್ಲಿದ್ದಾರೆ.

85 ಪುಟಗಳ ಭಿನ್ನ ನಿಲುವಿನ ತೀರ್ಪು ನೀಡಿರುವ ನ್ಯಾಯಮೂರ್ತಿ ತ್ರಿವೇದಿ, ಜಾತಿ ಒಂದನ್ನು ಪರಿಶಿಷ್ಟರ ಪಟ್ಟಿಯಲ್ಲಿ ಸೇರಿಸಲು ಇಲ್ಲವೇ ಹೊರ ತೆಗೆಯಲು ಸಂಸತ್ತಿಗೆ ಮಾತ್ರ ಅಧಿಕಾರ ಇದೆ. ಪರಿಶಿಷ್ಟ ಜಾತಿ ಏಕರೂಪದ ವರ್ಗವಾಗಿದ್ದು, ಇನ್ನಷ್ಟು ಉಪ ವಿಭಾಗಗಳನ್ನು ಮಾಡಲಾಗದು ಎಂದು ಹೇಳಿದ್ದಾರೆ.

ಬಹುಮತದ ತೀರ್ಪು ನೀಡಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್, ಒಳ ಮೀಸಲಾತಿ ವರ್ಗೀಕರಣವು ನ್ಯಾಯಾಲಯದ ಪರಾಮರ್ಶೆಗೆ ಒಳಪಟ್ಟಿದೆ ಎಂದು ತಿಳಿಸಿದ್ದಾರೆ.

ರಾಜ್ಯಗಳು ಮೀಸಲಾತಿ ವರ್ಗೀಕರಣಕ್ಕೆ ಮುಂಚೆ ಪ್ರಮಾಣೀಕರಿಸಬಹುದಾದ ಮಾಹಿತಿಗಳನ್ನು ಸಂಗ್ರಹಿಸಬೇಕು ಎಂದು ಚಂದ್ರಚೂಡ್ ಹೇಳಿದ್ದಾರೆ.

ಮಂಡಲ್ ತೀರ್ಪನ್ನು ಪ್ರಸ್ತಾಪಿಸಿರುವ ಮುಖ್ಯ ನ್ಯಾಯಮೂರ್ತಿ, ಈ ತೀರ್ಪು ಕೇವಲ ಇತರೆ ಹಿಂದುಳಿದ ವರ್ಗಗಳ ಒಳ ಮೀಸಲಾತಿಗೆ ಮಾತ್ರ ಸೀಮಿತವಲ್ಲ ಹೇಳಿದ್ದಾರೆ.

ಕೆಲ ಜಾತಿಗಳಿಗೆ ಸಮರ್ಪಕ ಪ್ರಾತಿನಿಧ್ಯ ಸಿಗದಿರುವ ಕಾರಣಕ್ಕಾಗಿ ರಾಜ್ಯಗಳು ಒಳ ಮೀಸಲಾತಿ ಕಲ್ಪಿಸಬಹುದು. ಆದರೆ ಈ ಜಾತಿ/ ಗುಂಪುಗಳು ಹಿಂದುಳಿದಿರುವ ಕಾರಣಕ್ಕಾಗಿಯೇ ಸಮರ್ಪಕ ಪ್ರಾತಿನಿಧ್ಯ ಪಡೆಯಲು ಸಾಧ್ಯವಾಗಿಲ್ಲ ಎಂಬುದನ್ನು ಸಾಬೀತು ಪಡಿಸಬೇಕು ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

ಪಂಜಾಬ್ ಕಲ್ಪಿಸಿದ್ದ ಒಳ ಮೀಸಲಾತಿ ಪ್ರಶ್ನಿಸಿ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಫೆಬ್ರವರಿ 8ರಂದು ತೀರ್ಪು ಕಾಯ್ದಿರಿಸಿತ್ತು.

## ಪರಿಶಿಷ್ಟರಿಗೆ ಕೆನೆಪದರ ಅನ್ವಯಿಸಬೇಕು

**(1ನೇ ಪುಟದಿಂದ)** ಪ್ರತಿಪಾದಿಸಿರುವ ನಿಜವಾದ ಸಮಾನತೆ ಹೊಂದಲು ಸಾಧ್ಯ ಎಂದಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ಮೀಸಲಾತಿಯ ಲಾಭ ಪಡೆದಿರುವವರ ಮಕ್ಕಳು ಹಾಗೂ ಪಡೆಯದೇ ಇರುವವರ ಮಕ್ಕಳನ್ನು ಒಂದೇ ಸ್ಥಾನದಲ್ಲಿಟ್ಟು ತೂಗಲು ಆಗುವುದಿಲ್ಲ ಎಂದು ನ್ಯಾಯಮೂರ್ತಿ ಗವಾಯಿ ಹೇಳಿದ್ದಾರೆ.

ಕನೆ ಪದರ ಪರಿಕಲ್ಪನೆಯು ಪರಿಶಿಷ್ಟ ಜಾತಿ ಹಾಗೂ ಪಂಗಡಗಳವರಿಗೆ ಅನ್ವಯವಾಗುತ್ತದೆ ಎಂಬ ಗವಾಯಿ ನಿಲುವನ್ನು ನ್ಯಾಯಮೂರ್ತಿ ವಿಕ್ರಮ್ ನಾಥ್ ಅವರು ಬೆಂಬಲಿಸಿದ್ದು, ಇತರೆ ಹಿಂದುಳಿದ ವರ್ಗಗಳಲ್ಲಿ ಕೆನೆಪದವರನ್ನು ಗುರುತಿಸಲು ಇರುವ ಮಾನದಂಡಗಳಿಗಿಂತ ಪರಿಶಿಷ್ಟರಲ್ಲಿ ಹಿಂದುಳಿದವರನ್ನು ಗುರುತಿಸುವ ಮಾನದಂಡ ಬೇರೆ ಆಗಿರಬಹುದು ಎಂದಿದ್ದಾರೆ.

ನ್ಯಾಯಮೂರ್ತಿ ಪಂಕಜ್ ಮಿತ್ತಲ್ ಅವರು ತೀರ್ಪು ನೀಡಿದ್ದು, ಮೀಸಲಾತಿಯ ಲಾಭ ಪಡೆದ ನಂತರ ಸಾಮಾನ್ಯ ವರ್ಗದವರ ಹೆಗಲಿಗೆ ಹೆಗಲು ಕೊಟ್ಟು ನಡೆಯುತ್ತಿರುವವರನ್ನು ಮೀಸಲಾತಿಯಿಂದ ಹೊರಗಿಡುವ ಕಸರತ್ತು ಕಾಲಕಾಲಕ್ಕೆ ನಡೆಯಬೇಕಿದೆ ಎಂದಿದ್ದಾರೆ.

ಮೊದಲ ಪೀಳಿಗೆ ಇಲ್ಲವೇ ಒಂದು ಪೀಳಿಗೆಗೆ ಮಾತ್ರ ಮೀಸಲಾತಿ ಸೀಮಿತವಾಗಬೇಕು. ಕುಟುಂಬವೊಂದು ಮೀಸಲಾತಿಯ ಲಾಭ ಪಡೆದು ಹೆಚ್ಚಿನ ಸ್ಥಾನಕ್ಕೆ ತಲುಪಿದ ನಂತರ, ಎರಡನೇ ಪೀಳಿಗೆಗೆ ಅದರ ಲಾಭವನ್ನು ನೀಡುವುದು ತಾರ್ಕಿಕವಲ್ಲ ಎಂದು ನ್ಯಾಯಮೂರ್ತಿ ಮಿತ್ತಲ್ ಹೇಳಿದ್ದಾರೆ. ಗವಾಯಿ ನಿಲುವನ್ನು ಬೆಂಬಲಿಸಿರುವ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ, ಪರಿಶಿಷ್ಟ ಜಾತಿ ಹಾಗೂ ಪಂಗಡಗಳಲ್ಲಿ ಕೆನೆಪದರ ಗುರುತಿಸುವುದು ಸರ್ಕಾರದ ಸಂವಿಧಾನಾತ್ಮಕ ಬಾಧ್ಯತೆ ಎಂದಿದ್ದಾರೆ.

## ತೀರ್ಪಿಗೆ ಮುಖ್ಯಮಂತ್ರಿ ಸ್ವಾಗತ

**(1ನೇ ಪುಟದಿಂದ)** ವಿಷಯಗಳ ಬಗ್ಗೆ ಪರಿಶಿಷ್ಟ ಜಾತಿಯ ನಾಯಕರು ಮತ್ತು ಕಾನೂನು ತಜ್ಞರ ಜೊತೆ ಸಮಾಲೋಚನೆ ನಡೆಸಿ ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದವರು ತಿಳಿಸಿದ್ದಾರೆ.

ಪರಿಶಿಷ್ಟ ಜಾತಿಯೊಳಗೆ ಒಳಮೀಸಲಾತಿ ಕಲ್ಪಿಸುವ ಬಗ್ಗೆ ಕಾಂಗ್ರೆಸ್ ಪಕ್ಷ ಬದ್ಧವಾಗಿದೆ. ಹಿಂದೆ ಕಾಂಗ್ರೆಸ್ ಪಕ್ಷದ ಸರ್ಕಾರವೇ ರಚಿಸಿದ್ದ ನ್ಯಾ.ಎ.ಜೆ.ಸದಾಶಿವ ಅವರ ಅಧ್ಯಕ್ಷತೆಯ ಆಯೋಗದ ವರದಿಯನ್ನು ಅನುಷ್ಠಾನಗೊಳಿಸುವುದಾಗಿ ನಾವು ಕಳೆದ ವಿಧಾನಸಭಾ ಚುನಾವಣೆಯಲ್ಲಿನ ಪಕ್ಷದ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗೆ ಸರ್ಕಾರ ಬದ್ಧವಾಗಿದೆ ಎಂದೂ ಸಿದ್ದರಾಮಯ್ಯ ತಿಳಿಸಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ರಾಜ್ಯದ ಬಿಜೆಪಿ ಸರ್ಕಾರ ಒಳಮೀಸಲಾತಿ ಬಗ್ಗೆ ಅವಸರದಲ್ಲಿ ತೀರ್ಮಾನ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿತ್ತು. ಪರಿಶಿಷ್ಟ ಜಾತಿಯೊಳಗಿನ ಮೀಸಲಾತಿಯನ್ನು ಸಂವಿಧಾನ ತಿದ್ದುಪಡಿಯ ಮೂಲಕ ಅನುಷ್ಠಾನಗೊಳಿಸಬಹುದು ಎಂದು ಕೇಂದ್ರ ಬಿಜೆಪಿ ಸರ್ಕಾರವೇ ರಚಿಸಿದ್ದ ಉಷಾ ಮೆಹ್ರಾ ಸಮಿತಿ ಸ್ಪಷ್ಟವಾಗಿ ತಿಳಿಸಿದ್ದರೂ ಕೇಂದ್ರ ಸರ್ಕಾರ ಇಲ್ಲಿಯ ವರೆಗೆ ತೀರ್ಮಾನ ಕೈಗೊಳ್ಳದೇ ಮೂಲೆಗೆ ಸರಿಸಿತ್ತು ಎಂದು ಸಿದ್ದರಾಮಯ್ಯ ಟೀಕಿಸಿದ್ದಾರೆ.

ಈಗಿನ ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ಶಿಫಾರಸುಗಳನ್ನು ಕೂಲಂಕುಶವಾಗಿ ಅಧ್ಯಯನ ನಡೆಸಿ, ಅಗತ್ಯ ಬಿದ್ದರೆ ಇದಕ್ಕೆ ಸಂಬಂಧಿಸಿದಂತೆ ಇತ್ತೀಚಿನ ಬೆಳವಣಿಗೆಗಳನ್ನು ಪರಿಗಣನೆಗೆ ತೆಗೆದುಕೊಂಡು ಸಮಾಲೋಚನೆ -ಸಂಧಾನದ ಮೂಲಕ ಒಳಮೀಸಲಾತಿ ಬಗ್ಗೆ ಸ್ಪಷ್ಟವಾದ ನಿರ್ಧಾರ ರಾಜ್ಯ ಸರ್ಕಾರ ಕೈಗೊಳ್ಳಲಿದೆ ಎಂದವರು ಹೇಳಿದ್ದಾರೆ.

## ಸಮಗ್ರ ಸೈಬರ್ ಭದ್ರತಾ ನೀತಿಗೆ ಚಾಲನೆ

ಬೆಂಗಳೂರು, ಆ. 1 - ಸೈಬರ್ ಅಪರಾಧಗಳ ವಿರುದ್ಧ ಹೋರಾಡಲು ಹಾಗೂ ಅರಿವು ಮೂಡಿಸಲು ರಾಜ್ಯ ಸರ್ಕಾರ ಸಮಗ್ರ ಸೈಬರ್ ಭದ್ರತಾ ನೀತಿಗೆ ಚಾಲನೆ ನೀಡಿದೆ.

ಸೈಬರ್ ಕುರಿತು ಅರಿವು ಮತ್ತು ಶಿಕ್ಷಣ, ಕೌಶಲ್ಯ ಉತ್ತೇಜನ ಹಾಗೂ ಸಹಭಾಗಿತ್ವದಲ್ಲಿ ಸಾಮರ್ಥ್ಯ ವೃದ್ಧಿ ಸೇರಿದಂತೆ ಹಲವು ಉದ್ದೇಶಗಳೊಂದಿಗೆ ಈ ನೀತಿ ರೂಪಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ನೀತಿಯ ಜಾರಿಗಾಗಿ ಐದು ವರ್ಷಗಳಲ್ಲಿ 103.84 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು. ಇದಕ್ಕಾಗಿ ಬಜೆಟ್‌ನಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರ ಜ್ಞಾನ ಇಲಾಖೆಗೆ ಅನುದಾನ ನೀಡಲಾಗಿದೆ. ಈ ಯೋಜನೆಯ ಅನ್ವಯ 500 ಪದವೀಧರರು ಹಾಗೂ 120 ಸ್ನಾತಕೋತ್ತರ ಪದವೀಧರರಿಗೆ ತರಬೇತಿ ಹಾಗೂ ಶಿಷ್ಯವೇತನ ನೀಡಲಾಗುವುದು.

ಈ ಬಗ್ಗೆ ಮಾತನಾಡಿರುವ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಸೈಬರ್ ಭದ್ರತೆಯ ಪ್ರಾಮುಖ್ಯತೆಯನ್ನು ರಾಜ್ಯ ಸರ್ಕಾರ ಅರಿತಿದೆ. ನಮ್ಮ ನಾಗರಿಕರು ಹಾಗೂ ಉದ್ಯಮಗಳ ಸೈಬರ್ ಭದ್ರತೆಗಾಗಿ ನೀತಿಯನ್ನು ರೂಪಿಸಲಾಗಿದೆ ಎಂದಿದ್ದಾರೆ.

ಈ ನೀತಿಯ ಅನ್ವಯ ಸಮಾಜದ ಎಲ್ಲಾ ವರ್ಗಗಳಿಗೆ ಸೈಬರ್ ಭದ್ರತಾ ವ್ಯವಸ್ಥೆ ರೂಪಿಸಲಾಗುವುದು. ಇದೇ ವೇಳೆ ರಾಜ್ಯದ ಮಾಹಿತಿ ತಂತ್ರಜ್ಞಾನ ಆಸ್ತಿಗಳಿಗೆ ಸೈಬರ್ ಸುರಕ್ಷತೆ ಸಹ ಒದಗಿಸಲಾಗುವುದು.

# ತುಂಬಿ ಹರಿಯುತ್ತಿರುವ ತುಂಗಭದ್ರಾ ನದಿ : ಇಟ್ಟಿಗೆ ಭಟ್ಟಿ, ಜಮೀನುಗಳಿಗೆ ನೀರು ; ನದಿ ಬಳಿ ಬರದಂತೆ ಬಿಗಿ ಬಂದೋಬಸ್ತ್

ಹರಿಹರ, ಆ.1- ನಗರದಲ್ಲಿ ಮೈದುಂಬಿಕೊಂಡು ಹರಿಯುತ್ತಿರುವ ತುಂಗಭದ್ರಾ ನದಿಯಿಂದಾಗಿ ನದಿ ಪಕ್ಕದಲ್ಲಿ ಇರುವ ಜಮೀನಿಗೆ ನೀರು ನುಗ್ಗಿದ್ದು, ಹಲವಾರು ಬೆಳೆಗಳು ನಾಶವಾಗಿವೆ. ಜೊತೆಗೆ ಅನೇಕ ಇಟ್ಟಿಗೆ ಬಟ್ಟಿಗಳೂ ಸಹ ಜಲಾವೃತವಾಗಿವೆ.

ನಗರದಲ್ಲಿ ತುಂಗಭದ್ರಾ ನದಿಯ ನೀರಿನ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದರಿಂದ ಗಂಗಾನಗರ, ತೆಗ್ಗಿನಕೇರಿ ಸೇರಿದಂತೆ ಹಲವಾರು ಬಡಾವಣೆಯಲ್ಲಿ ಸಾಕಷ್ಟು ಮನೆಗಳು ನೀರಿನಲ್ಲಿ ಮುಳಗಿಕೊಂಡಿವೆ. ಗುತ್ತೂರು, ದೀಟೂರು, ಸಾರಥಿ, ಕೋಡಿಯಾಲ - ಹೊಸಪೇಟೆ, ಚಿಕ್ಕಬಿದರಿ ಗ್ರಾಮದಲ್ಲಿ ಅನೇಕ ಇಟ್ಟಿಗೆ ಬಟ್ಟೆಗಳು ನೀರಿನಲ್ಲಿ ಮುಳಗಿಕೊಂಡು ಲಕ್ಷಾಂತರ ರೂ.ಗಳಷ್ಟು ನಷ್ಟವಾಗಿದೆ. ಅನೇಕರ ಜಮೀನಿಗೆ ನೀರು ನುಗ್ಗಿದ್ದರಿಂದ ಸಾಕಷ್ಟು ಬೆಳೆಗಳೂ ಸಹ ಹಾನಿಯಾಗಿವೆ.

ನಗರದಲ್ಲಿ ರಭಸವಾಗಿ ಹರಿಯುತ್ತಿರುವ ನೀರಿನ ರಮಣೀಯ ದೃಶ್ಯ ವೀಕ್ಷಿಸಲು ಸಹಸ್ರಾರು ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದು, ಅದರ ಹಿನ್ನೆಲೆಯಲ್ಲಿ ತುಂಗಭದ್ರಾ ನದಿಯ ಹಳೆಯ ಸೇತುವೆಯ ಮೇಲೆ ವಾಹನಗಳು ಮತ್ತು ಪ್ರವಾಸಿಗರು ಓಡಾಡದಂತೆ ಮತ್ತು ರಾಘವೇಂದ್ರ ಸ್ವಾಮಿ ಮಠದ ಹಿಂಭಾಗದಲ್ಲಿ ತುಂಗಾರತಿ ಸ್ಥಳದಲ್ಲಿ ಕೂಡ ಓಡಾಡದಂತೆ ಪೊಲೀಸ್ ಇಲಾಖೆಯ ವತಿಯಿಂದ ಬ್ಯಾರಿಕೇಡ್ ಹಾಕಿ ರಸ್ತೆ ಬಂದ್ ಮಾಡಲಾಗಿದೆ. ಮತ್ತು ಸೇತುವೆ ಪಕ್ಕದಲ್ಲಿರುವ ತಡೆಗೋಡೆ ಮೇಲೆ ನಿಂತುಕೊಂಡು ನದಿ ವೀಕ್ಷಿಸುವುದನ್ನು ತಡೆಯಲು ಕಳಪೆ ಗುಣಮಟ್ಟದ ಆಯಿಲ್ ಹಾಕಿ ಜನರು ನಿಲ್ಲದಂತೆ ನಿರ್ಬಂಧಗಳನ್ನು ಹೇರಲಾಗಿದೆ.




ಮೈದುಂಬಿ ಹರಿಯುತ್ತಿರುವ ತುಂಗಾಭದ್ರಾ ನದಿ (ಚಿತ್ರ 1), ನದಿಯ ತಡೆಗೋಡೆ ಮೇಲೆ ಕಳಪೆ ಗುಣಮಟ್ಟದ ಆಯಿಲ್ ಹಾಕುತ್ತಿರುವುದು. (ಚಿತ್ರ 2)

ನದಿ ನೋಡಲು ಆಗಮಿಸುವ ಪ್ರವಾಸಿಗರು ಐಸ್ ಕ್ರೀಂ, ಸೌತೆಕಾಯಿ, ಮೆಕ್ಕೆಜೋಳ, ಬೇಕರಿ ಉತ್ಪನ್ನಗಳನ್ನು ಖರೀದಿಸುವ ಮೂಲಕ ಬಾಯಿ ಚಪಲವನ್ನು ತೀರಿಸಿಕೊಳ್ಳಲು ಮುಂದಾಗಿದ್ದಾರೆ. ರಾಘವೇಂದ್ರ ಸ್ವಾಮಿ ಮಠ, ಆಂಜನೇಯ ಸ್ವಾಮಿ, ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ, ದೇವರ ಆಶೀರ್ವಾದ ಪಡೆದುಕೊಂಡು ಮನೆಗಳಿಗೆ ತೆರಳುತಿದ್ದಾರೆ. ಅನೇಕ ಯುವಕರು ನದಿಯಲ್ಲಿ ಹರಿಯುವ ನೀರಿನ ಬಳಿ ಹೋಗುವುದಕ್ಕೆ ಮುಂದಾಗುತ್ತಿದ್ದು, ಇದರಿಂದಾಗಿ ಅಪಾಯಕ್ಕೆ ಬಲಿಯಾಗುತ್ತಾರೆ ಎಂದು ಮತ್ತು ವಾಹನಗಳು ಹೆಚ್ಚಾಗಿ ಟ್ರಾಫಿಕ್ ಸಮಸ್ಯೆಯನ್ನು ಪರಿಹರಿಸಲು ಪೊಲೀಸ್ ಇಲಾಖೆ ಕೂಡ ಕೆಲವು ಸಿಬ್ಬಂದಿಗಳನ್ನು ಸೇತುವೆಯ ಹತ್ತಿರದಲ್ಲಿ ನಿಯೋಜಿಸಿದೆ.

## ವರುಣ - ನಾಟ್ಯ

ವರುಣ ನೀ ಮಹಾ ಕರುಣೆಯಲ್ಲಿ
ವರ್ಷ ಧಾರೆ ಧಾರೆಯನು ಸುರಿಸಿಲ್ಲಿ
ಕೊಳೆಯನ್ನೆಲ್ಲಾ ತೊಳೆಯ ಬಂದೆಯಾ?
ಇಳೆಯ ಬಹು ಭಾರವನ್ನು ತೊಡೆದೆಯಾ?
ಬಾ...ಬಾ...ಎಂದು ನಾವಂದು
ಮನದಲ್ಲಿ ನೋವಲ್ಲಿ ನೊಂದು
ಗೋಗೆರದರೂ ನೀ ಅಂದು......
ಕರೆಯನಾಲಿಸಿ ನೀ.. ಬರಲಿಲ್ಲ..!
ಕುಡಿಯಲೂ ನೀರ ಬರ ನೀ ಬರದೆ
ನೀರೆಲ್ಲಾ ಬತ್ತಿ ಬರಿದಾಯಿತಲ್ಲಾ....
ಬರಗಾಲದ ಬೇಗೆ ರಮೆಯೊಡಲಲ್ಲಿ
ಅನಾವೃಷ್ಟಿಯಲೆಲ್ಲಾ ಬಳಲಿತಾಗ !
ಹೋಗು.....ನೀ....ಹೋಗೆಂದು
ಕಣ್ಣೀರನು ಸುರಿಸುತಲಿ ಇಂದು
ತಂಡಿಯಲಿ ಬಸವಳಿದು ನೆಂದು
ವರುಣ ನೃತ್ಯ ನಿಲ್ಲಿಸೆಂದರೂ ನಿಲ್ಲಿಸಲಿಲ್ಲಾ!
ಸುರಿ ಸುರಿದ ವರ್ಷ ಧಾರೆಯಲ್ಲಿಂದು
ರಮೆಯ ಮಡಿಲು ನದಿಯಾಯಿತಿಲ್ಲಿ
ಚರಾ ಸ್ಥಿರವನ್ನೆಲ್ಲಾ ನೀರು ಕುಡಿಯಿತೆಲ್ಲಾ
ಮಳೆಯ ಆರ್ಭಟವು ಎಲ್ಲೆಲ್ಲೂ ಈಗ!
ಪಂಚಭೂತಗಳ ಮಹಾ ಅಬ್ಬರದಾಟವು
ಮಾನವನ ಸೊಕ್ಕಿಗೆ ಕಲಿಸಿತೇ ಪಾಠವು
ಮಳೆ ಬೆಂಕಿ ಗಾಳಿ ದಾಳಿಯಲ್ಲಿ ಉಬ್ಬರ
ರಮೆಗಿಹುದಿಲ್ಲಿ ಶಿಕ್ಷೆ ಪರೀಕ್ಷೆಯ ಬರ್ಬರ!!

- ವೀಣಾ ಕೃಷ್ಣಮೂರ್ತಿ, ದಾವಣಗೆರೆ

# ನಗರದಲ್ಲಿ ಇಂದು ಜನಜಾಗೃತಿ ಧರ್ಮ ಸಮಾವೇಶ

ಶ್ರೀ ಅಭಿನವ ರೇಣುಕ ಮಂದಿರದಲ್ಲಿ ನಡೆಯುತ್ತಿರುವ ರಂಭಾಪುರಿ ಪೀಠದ ಶ್ರೀಮದ್ ರಂಭಾಪುರಿ ಜಗದ್ಗುರುಗಳವರ 26ನೇ ವರ್ಷದ ಆಷಾಢ ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮೋತ್ತೇಜಕ ಕಾರ್ಯಕ್ರಮದಲ್ಲಿ ಇಂದಿನ ಸಮಾರಂಭದ ವಿವರ.



**ಶಿವಗಂಗಾ ಶ್ರೀನಿವಾಸ್ ಅವರಿಗೆ 'ಶ್ರಮ ಸೇವಾ ಸಂಜೀವಿನಿ' ಬಿರುದು ಪ್ರದಾನ**

ಇಂದು ಸಂಜೆ 6.30ಕ್ಕೆ ಏರ್ಪಾಡಾಗಿರುವ ಧರ್ಮೋತ್ತೇಜಕ ಸಮಾರಂಭದ ನೇತೃತ್ವವನ್ನು ಶ್ರೀ ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು (ಹಿರೇಮಠ, ದೊಡ್ಡಗುಣಿ ಬಂಕಾಪುರ)ವಹಿಸುವರು. ತಾವರಕೆರೆ ಶಿಲಾಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಉಪದೇಶಾಮೃತ ನೀಡುವರು.

ಇದೇ ಸಂದರ್ಭದಲ್ಲಿ ಕೈಗಾರಿಕೋದ್ಯಮಿ ಶಿವಗಂಗಾ ಶ್ರೀನಿವಾಸ್ ಅವರಿಗೆ 'ಶ್ರಮ ಸೇವಾ ಸಂಜೀವಿನಿ' ಬಿರುದಿನೊಂದಿಗೆ ಗೌರವ ಶ್ರೀರಕ್ಷೆ, ಪ್ರಶಸ್ತಿ ಪ್ರದಾನ ಮಾಡಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಜಿ. ಎಂ.ಗಂಗಾಧರಸ್ವಾಮಿ, ಶಾಸಕ ಶಿವಗಂಗಾ ಬಸವರಾಜ್, ಮಹಾಪೌರ ಬಿ.ಹೆಚ್. ವಿನಾಯಕ, ದಾವಣಗೆರೆ ವರದಿಗಾರರ ಒಕ್ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ, ಎಪಿಎಂಸಿ ಸಹಾಯಕ ನಿರ್ದೇಶಕ ಜೆ. ಪ್ರಭು, ಅಭಾವೀ ಮಹಾಸಭಾ ಜಿಲ್ಲಾಧ್ಯಕ್ಷ ಐಗೂರು ಚಂದ್ರಶೇಖರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

## ಇನ್ಫೋಸಿಸ್ ತೆರಿಗೆ ನೋಟಿಸ್ ವಾಪಸ್

ನವದೆಹಲಿ, ಆ. 1 - 32,403 ಕೋಟಿ ರೂ.ಗಳ ಜಿ.ಎಸ್.ಟಿ. ತೆರಿಗೆ ಪಾವತಿಸುವಂತೆ ಕರ್ನಾಟಕದ ಅಧಿಕಾರಿಗಳು ಕಳಿಸಿದ್ದ ನೋಟಿಸ್ ವಾಪಸ್ ಪಡೆದಿದ್ದಾರೆ ಎಂದು ಇನ್ಫೋಸಿಸ್ ಕಂಪನಿ ತಿಳಿಸಿದೆ.

ದೇಶದ ಎರಡನೇ ಅತಿದೊಡ್ಡ ಮಾಹಿತಿ ತಂತ್ರಜ್ಞಾನ ಕಂಪನಿಯಾದ ಇನ್ಫೋಸಿಸ್‌ಗೆ 32,403 ಕೋಟಿ ರೂ.ಗಳ ತೆರಿಗೆ ನೋಟೀಸ್ ಕಳಿಸಲಾಗಿತ್ತು. 2017 ನಂತರದ ವರ್ಷಗಳಲ್ಲಿ ಕಂಪನಿಯ ವಿದೇಶಿ ಶಾಖೆಗಳಿಂದ ಪಡೆದ ಸೇವೆಗಳಿಗೆ ಸಂಬಂಧಿಸಿದಂತೆ ನೋಟಿಸ್ ಕಳಿಸಲಾಗಿತ್ತು. ಆದರೆ ಈ ವೆಚ್ಚಗಳಿಗೆ ಜಿ.ಎಸ್.ಟಿ. ಅನ್ವಯವಾಗುವುದಿಲ್ಲ ಎಂದು ಇನ್ಫೋಸಿಸ್ ಹೇಳಿತ್ತು. ನಂತರ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಕಂಪನಿ, ಅಧಿಕಾರಿಗಳು ನೋಟೀಸ್ ವಾಪಸ್ ಪಡೆದಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಮುಂದಿನ ವಿವರಗಳನ್ನು ಡಿ.ಜಿ.ಜಿ.ಐ. ಕೇಂದ್ರ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ತಿಳಿಸಿದ್ದಾರೆ ಎಂದು ಹೇಳಿದೆ. ಈ ನೋಟೀಸ್ ಕಳಿಸಿದ ಬಗ್ಗೆ ಐ.ಟಿ. ಉದ್ಯಮ ಸಂಸ್ಥೆಗಳ ಒಕ್ಕೂಟವಾದ ನ್ಯಾಸ್ಕಾಂ ಆಕ್ಷೇಪ ವ್ಯಕ್ತಪಡಿಸಿತ್ತು.

## ಸ್ವಚ್ಛ ಭಾರತ್ ಮಿಷನ್ : ಅರ್ಜಿ

ದಾವಣಗೆರೆ, ಆ.1- ಸ್ವಚ್ಛ ಭಾರತ್ ಮಿಷನ್ 2.0 ರ ಅಡಿಯಲ್ಲಿ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವಸಹಾಯ ಗುಂಪು ಎಸ್‌ಹೆಚ್‌ಜಿ, ಸರ್ಕಾರೇತರ ಸಂಸ್ಥೆ ಎನ್‌ಜಿಓ ಸದಸ್ಯರ ನೇಮಕಾತಿಗಾಗಿ ಆಸಕ್ತಿಯುಳ್ಳ ಸದಸ್ಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಯ್ಕೆ ಪ್ರಕ್ರಿಯೆ ಮತ್ತು ವೇತನಕ್ಕೆ ಸಂಬಂಧಿಸಿದ ವಿವರಗಳು www.davanagerecity.mrc.gov.in ಅಂತರ್ಜಾಲ ತಾಣದಲ್ಲಿ ಲಭ್ಯವಿರುತ್ತದೆ. ಆಸಕ್ತರು ಆಗಸ್ಟ್ 2ರೊಳಗೆ ಪಾಲಿಕೆ ಕಚೇರಿಗೆ ತಲುಪಿಸುವಂತೆ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ನಾಮದೇವ ಮಹಾರಾಜರ ಸಂಜೀವಿನಿ ಸೋಹಳಾ



ಸಂತ ಶ್ರೇಷ್ಠ ಶಿರೋಮಣಿ ಶ್ರೀ ನಾಮದೇವ ಮಹಾರಾಜರ 674ನೇ ಸಂಜೀವಿನಿ ಸೋಹಳಾ (ಪುಣ್ಯಾರಾಧನೆ) ಕಾರ್ಯಕ್ರಮವು ಇಂದು ದೊಡ್ಡಪೇಟೆಯಲ್ಲಿರುವ ಶ್ರೀ ವಿಠಲ ಮಂದಿರದಲ್ಲಿ ನಡೆಯಲಿದೆ.

ನಾಮದೇವ ಸಿಂಪಿ ಸಮಾಜದಿಂದ ಈ ಕಾರ್ಯಕ್ರಮ ಏರ್ಪಾಡಾಗಿದ್ದು, ಇಂದು ಮುಂಜಾನೆ 5 ರಿಂದ 7ರವರೆಗೆ ಭಜನೆ, ಕಾಕಡಾರತಿ, ಬೆಳಿಗ್ಗೆ 7 ಗಂಟೆಗೆ ಹ.ಭ.ಪ. ಮಂಜುನಾಥ ಪಿಸೆ ಸಂಗಡಿಗರಿಂದ ಹರಿಪಾಠ, ಬೆಳಿಗ್ಗೆ 8.30ರಿಂದ ಪ್ರವಚನ, ಬೆಳಿಗ್ಗೆ 10 ರಿಂದ ಪಲ್ಲಕ್ಕಿ ಉತ್ಸವ ಮತ್ತು ಗುಲಾಲ್ ಕಾರ್ಯಕ್ರಮ, ಮಧ್ಯಾಹ್ನ 12 ಕ್ಕೆ ಕೀರ್ತನೆ ಮಧ್ಯಾಹ್ನ 1.30ಕ್ಕೆ ಮಹಾಮಂಗಳಾರತಿ ಕಾರ್ಯಕ್ರಮಗಳು ಆಯೋಜನೆಗೊಂಡಿವೆ.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರು, ಸದ್ಭಕ್ತರು ಭಾಗವಹಿಸುವಂತೆ ಅಧ್ಯಕ್ಷ ಎಂ.ಎಸ್. ವಿಠಲ್, ಗೌರವಾಧ್ಯಕ್ಷ ಜ್ಞಾನದೇವ ಬೊಂಗಾಳೆ ಅವರುಗಳು ಕೋರಿದ್ದಾರೆ.

# ಪರಿಪೂರ್ಣತೆಯೆಡೆಗೆ ಕರೆದೊಯ್ಯುವುದೇ ನಿಜವಾದ ಧರ್ಮ: ರಂಭಾಪುರಿ ಶ್ರೀ

ದಾವಣಗೆರೆ, ಆ.1- ಸಮಸ್ತ ಜನರ ಭೋಗ, ಮೋಕ್ಷಗಳಿಗೆ ಧರ್ಮವೇ ಮೂಲ. ಸತ್ಯ ಮತ್ತು ಪ್ರಾಮಾಣಿಕತೆಗಿಂತ ಮಿಗಿಲಾದ ಧರ್ಮ ಇನ್ನೊಂದಿಲ್ಲ. ಮನುಷ್ಯನನ್ನು ಪರಿಪೂರ್ಣದೆಡೆಗೆ ಕರೆದೊಯ್ಯುವುದೇ ನಿಜವಾದ ಧರ್ಮವೆಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ನಗರದ ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಮಂಗಲ ಭವನದಲ್ಲಿ ನಿನ್ನೆ ಜರುಗಿದ ಆಷಾಢ ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಜನಜಾಗೃತಿ ಧರ್ಮ ಸಮಾವೇಶದ 2ನೇ ದಿನದ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡುತ್ತಿದ್ದರು.



ಭೌತಿಕ ಬದುಕು ಸುಖ-ದುಃಖಗಳಿಂದ ಕೂಡಿದೆ. ಯಾವುದೂ ಶಾಶ್ವತವಲ್ಲ. ಸುಖ ಬಂದಾಗ ಹಿಗ್ಗದೇ ಕಷ್ಟ ಬಂದಾಗ ಕುಗ್ಗದೇ ಸಮತೋಲನದಿಂದ ಬಾಳುವುದು ಮನುಷ್ಯನ ಧ್ಯೇಯವಾಗಬೇಕು. ಮನುಷ್ಯನಲ್ಲಿರುವ ಅಸುರೀ ಗುಣಗಳು ನಾಶಗೊಂಡು ದೈವೀ ಗುಣಗಳು ಪ್ರಾಪ್ತವಾಗಲು ಸಜ್ಜನರ ಒಡನಾಟದಲ್ಲಿ ಬಾಳುವುದು ಶ್ರೇಯಸ್ಕರ. ಅಂತರಂಗ, ಬಹಿರಂಗ ಶುದ್ಧಗೊಳ್ಳಬೇಕೆಂಬ ವೀರಶೈವ ಧರ್ಮದ ಧ್ವನಿ ಅರ್ಥಪೂರ್ಣವಾದುದು. ಇವೆರಡೂ ಪರಿಶುದ್ಧಗೊಳಗೊಳ್ಳಲು ಶ್ರೀ ಗುರುವಿನ ಸಂಸ್ಕಾರ ಪಡೆದು ಸನ್ಮಾರ್ಗದಲ್ಲಿ ಸಾಗಿದರೆ ಜೀವನ ಸಾರ್ಥಕಗೊಳ್ಳುವುದು. ಶ್ರೀ ಜಗದ್ಗುರು ರೇಣುಕಾಚಾರ್ಯರು ಜೀವನ ಸಿದ್ಧಾಂತದ ಮೌಲ್ಯಗಳನ್ನು ಪ್ರತಿಪಾದಿಸಿ, ಜೀವ ಸಂಕುಲಕ್ಕೆ ಮಾರ್ಗದರ್ಶನ ನೀಡಿದ್ದಾರೆ ಎಂದರು.

ಮಳಲಿ ಸಂಸ್ಥಾನ ಮಠದ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ತಮ್ಮ ಉಪದೇಶಾಮೃತ ನುಡಿಯಲ್ಲಿ ಸಮರ ಜೀವನವನ್ನು ಅಮರ ಜೀವನದತ್ತ ಕರೆದೊಯ್ಯುವ ಶಕ್ತಿ ಶ್ರೀ ಗುರುವಿಗೆ ಇದೆ. ವೀರಶೈವ ಧರ್ಮದಲ್ಲಿ ಅಷ್ಟೇ ಅಲ್ಲ. ಎಲ್ಲ ಧರ್ಮಗಳಲ್ಲಿ ಗುರುವಿಗೆ ಪ್ರಥಮ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. ಗುರು ತೋರಿದ ದಾರಿಯಲ್ಲಿ ನಡೆಯುವುದೇ ನಮ್ಮೆಲ್ಲರ ಗುರಿಯಾಗಬೇಕು ಎಂದರು.

ನೇತೃತ್ವ ವಹಿಸಿದ್ದ ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಧರ್ಮ ಸಂಪ್ರದಾಯ ಬೇರೆ ಬೇರೆಯಾದರೂ ಅವೆಲ್ಲವುಗಳ ಮೂಲ ಗುರಿ ಒಂದೆಯಾಗಿದೆ ಎಂದರು.



## ಜುಲೈನಲ್ಲಿ ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ.85ರಷ್ಟು ಹೆಚ್ಚು ಮಳೆ

| ಜಿಲ್ಲೆಯ ಮಳೆಯ ಪ್ರಮಾಣ (ಮಿ.ಮೀ.ಗಳಲ್ಲಿ) | | | | |
|---|---|---|---|---|
| ತಾಲ್ಲೂಕು | ಜೂನ್ | | ಜುಲೈ | |
| | ಸಾಮಾನ್ಯ | ವಾಸ್ತವಿಕ | ಸಾಮಾನ್ಯ | ವಾಸ್ತವಿಕ |
| ಚನ್ನಗಿರಿ | 100.9 | 68.7 | 168.0 | 223.2 |
| ದಾವಣಗೆರೆ | 74.0 | 75.9 | 84.9 | 182.1 |
| ಹರಿಹರ | 70.9 | 78.5 | 86.6 | 201.5 |
| ಹೊನ್ನಾಳಿ | 83.6 | 87.0 | 101.0 | 254.8 |
| ಜಗಳೂರು | 56.9 | 82.4 | 66.2 | 97.5 |
| ನ್ಯಾಮತಿ | 120.6 | 65.3 | 179.8 | 350.4 |

ದಾವಣಗೆರೆ, ಆ. 1 - ದಾವಣಗೆರೆ ಜಿಲ್ಲೆಯಲ್ಲಿ ಜುಲೈನಲ್ಲಿ ವಾಡಿಕೆಗಿಂತ ಶೇ.85ರಷ್ಟು ಹೆಚ್ಚು ಧಾರಾಕಾರ ಮಳೆ ಸುರಿದಿದೆ. ಹೊನ್ನಾಳಿ ತಾಲ್ಲೂಕಿನಲ್ಲಿ ವಾಡಿಕೆಗಿಂತ ಅತಿ ಹೆಚ್ಚಿನ ಶೇ.152ರಷ್ಟು ಮಳೆಯಾಗಿದೆ.

ಜೂನ್ ತಿಂಗಳಲ್ಲಿ ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ.4ರಷ್ಟು ಕಡಿಮೆ ಮಳೆಯಾಗಿತ್ತು. ಅದರಲ್ಲೂ ಚನ್ನಗಿರಿ ತಾಲ್ಲೂಕಿನಲ್ಲಿ ವಾಡಿಕೆಗಿಂತ ಶೇ.32 ಹಾಗೂ ನ್ಯಾಮತಿಯಲ್ಲಿ ಶೇ.46ರಷ್ಟು ಕಡಿಮೆ ಮಳೆಯಾಗಿತ್ತು.

ಜುಲೈ ತಿಂಗಳಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಜುಲೈನಲ್ಲಿ ಜಿಲ್ಲೆಯ ವಾಡಿಕೆ ಮಳೆ ಪ್ರಮಾಣ 108 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 199 ಮಿ.ಮೀ. ಮಳೆ ಸುರಿದಿದೆ. ಒಟ್ಟಾರೆ ಮಳೆಯ ಪ್ರಮಾಣ ಶೇ.85ರಷ್ಟು ಹೆಚ್ಚಾಗಿದೆ.

ಜುಲೈ ತಿಂಗಳಲ್ಲಿ ಚನ್ನಗಿರಿಯಲ್ಲಿ ವಾಡಿಕೆಗಿಂತ ಶೇ.33ರಷ್ಟು ಹೆಚ್ಚಿನ ಮಳೆಯಾಗಿದೆ. ದಾವಣಗೆರೆಯಲ್ಲಿ ಶೇ.114, ಹರಿಹರದಲ್ಲಿ ಶೇ.133, ಹೊನ್ನಾಳಿಯಲ್ಲಿ ಶೇ.152, ಜಗಳೂರಿನಲ್ಲಿ ಶೇ.47 ಹಾಗೂ ನ್ಯಾಮತಿಯಲ್ಲಿ ಶೇ.95ರಷ್ಟು ಹೆಚ್ಚು ಮಳೆಯಾಗಿದೆ.

ಮಳೆಗಾಲದ ಅವಧಿಯ ಮೊದಲ ಎರಡು ತಿಂಗಳಲ್ಲಿ ಜಿಲ್ಲೆಯ ವಾಡಿಕೆ ಮಳೆ ಪ್ರಮಾಣ 295 ಮಿ.ಮೀ ಆಗಿದ್ದರೆ, ಇದುವರೆಗೂ 422 ಮಿ.ಮೀ. ಮಳೆ ಸುರಿದಿದೆ. ಒಟ್ಟಾರೆ ಮಳೆಯಲ್ಲಿ ಶೇ.42ರಷ್ಟು ಹೆಚ್ಚಳವಾಗಿದೆ.

## ಶಾಮನೂರಿನ ಎಸ್.ಜೆ. ಪ್ರಶಾಂತ್ ಅವರಿಗೆ ಪಿಹೆಚ್‌ಡಿ ಪದವಿ ಪ್ರದಾನ



ದಾವಣಗೆರೆ, ಆ. 1- ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಮೆಕ್ಯಾನಿಕಲ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶಾಮನೂರಿನ ಎಸ್.ಜೆ. ಪ್ರಶಾಂತ್ ಅವರು ಯು.ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಪ್ರಾಧ್ಯಾಪಕ ಡಾ. ಕೆ.ಜಿ. ಸತೀಶ್ ಅವರ ಮಾರ್ಗದರ್ಶನದಲ್ಲಿ 'ಇನ್ವೆಸ್ಟಿಗೇಷನ್ ಆನ್ ಸಿ ವಾಟರ್ ಡ್ಯುರೆಬಿಲಿಟಿ ಆಫ್ ಫಿಲ್ಡ್ ಪಾಲಿಮರ್ ಹೈಬ್ರಿಡ್ ಕಾಂಪೋಸಿಟ್' ವಿಷಯ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ ಪಿಹೆಚ್‌ಡಿ ಪದವಿ ನೀಡಿದೆ.

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆದ 24ನೇ ವಾರ್ಷಿಕ ಘಟಿಕೋತ್ಸವದಲ್ಲಿ ಉಪ ಕುಲಪತಿ ಡಾ. ಎಸ್. ವಿದ್ಯಾಶಂಕರ್ ಅವರು ಪದವಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಕುಲಸಚಿವರಾದ ಡಾ. ಬಿ.ಇ. ರಂಗಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಪ್ರಶಾಂತ್ ಅವರು, ಶಾಮನೂರಿನ ಶ್ರೀಮತಿ ಕಲಾವತಿ ಮತ್ತು ಜಯಣ್ಣ ಅವರ ಪುತ್ರ ಹಾಗೂ ಗಾಜನೂರು ನವೋದಯ ವಿದ್ಯಾಲಯದ ಪ್ರಾಧ್ಯಾಪಕರಾದ ಶ್ರೀಮತಿ ರೇಖಾ ಆರ್. ಸುಲಾಖೆ ಅವರ ಪತಿ.

## ಶೂಟಿಂಗ್‌ನಲ್ಲಿ ಸ್ವಪ್ನಿಲ್‌ಗೆ ಯಶಸ್ಸು

(1ನೇ ಪುಟದಿಂದ) ನಡೆಸಬೇಕಾಗುತ್ತದೆ. ಹೀಗಾಗಿ ಇದು ಅತ್ಯಂತ ಕಠಿಣ ಸವಾಲಿನದ್ದು ಎಂದು ಪರಿಗಣಿಸಲಾಗಿದೆ. 2012ರಲ್ಲಿ ಜೊಯದೀಪ್ ಕರ್ಮಕರ್ ಅವರು ಲಂಡನ್‌ನಲ್ಲಿ ನಡೆದ ಪಂದ್ಯಾವಳಿಯಲ್ಲಿ ನಾಲ್ಕನೇ ಸ್ಥಾನ ತಲುಪಲು ಮಾತ್ರ ಸಾಧ್ಯವಾಗಿತ್ತು. ಕುಸಾಲೆ ಅವರು ರೈಲ್ವೆ ಇಲಾಖೆಯಲ್ಲಿ ಕಲೆಕ್ಟರ್ ಆಗಿದ್ದಾರೆ.

# 'ಕ್ಯಾನ್ಸರ್' ಗುಣಪಡಿಸುವ ಕಾಯಿಲೆ - ಹೆದರದಿರಿ, ಆದರೆ ಎಚ್ಚರಿಕೆಯಿಂದಿರಿ

'ಕ್ಯಾನ್ಸರ್ ಎಂದರೆ 'ಕ್ಯಾನ್ಸಲ್' ಎಂಬ ಮಾತು ಹೆಚ್ಚು ಪ್ರಚಲಿತದಲ್ಲಿದೆ, ಆದರೆ ಇದನ್ನು ಹುಸಿಯಾಗಿಸುವುದು ರೋಗಿ ಮತ್ತು ವೈದ್ಯರ ಕೈಲಿದೆ. ಇದು ಒಂದು ಮಾರಕ ರೋಗವಾಗಿದ್ದು, ಈ ರೋಗ ಬಂದಿದೆ ಎಂದು ಯಾರಿಗಾದರೂ ತಿಳಿದರೆ ಸಾಕು ತುಂಬಾ ಭಯಭೀತರಾಗುತ್ತಾರೆ. ಆರಂಭಿಕ ಹಂತದಲ್ಲಿ ಈ ರೋಗವನ್ನು ಪತ್ತೆ ಹಚ್ಚಿದರೆ ರೋಗಿ ಬಹು ಬೇಗ ಗುಣಮುಖನಾಗಬಹುದು, ಆದರೆ ಈ ರೋಗ ಬಂದಿದೆ ಎಂದು ತಿಳಿಯುವಷ್ಟರಲ್ಲಿ ಪರಿಸ್ಥಿತಿ ಕೈ ಮೀರಿ ಹೋಗಿರುತ್ತದೆ. ನಂತರದಲ್ಲಿ ಸೂಕ್ತ ಚಿಕಿತ್ಸೆ ತೆಗೆದುಕೊಂಡಲ್ಲಿ ರೋಗಿ ಗುಣಮುಖನಾಗುವ ಸಾಧ್ಯತೆ ಹೆಚ್ಚು. ಯಾವುದೇ ಕಾಯಿಲೆ ಯಾವ ವಯಸ್ಸಿನವರಿಗಾದರೂ ಬರಬಹುದು. ಹಾಗೆಯೇ ಕ್ಯಾನ್ಸರ್ ಕೂಡ. 40 ವರ್ಷ ಮೇಲ್ಪಟ್ಟ ಎಲ್ಲಾ ಪುರುಷ ಹಾಗೂ ಮಹಿಳೆಯರು ತಪ್ಪದೇ ವರ್ಷಕ್ಕೊಮ್ಮೆ ದೇಹವನ್ನು ತಪಾಸಣೆಗೆ ಒಳಪಡಿಸಿ, ತಾನು ಇತರೆ ರೋಗಗಳ ಜೊತೆಗೆ, ಕ್ಯಾನ್ಸರ್‌ನಿಂದಲೂ ಮುಕ್ತ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಕ್ಯಾನ್ಸರ್ ಒಂದು ವೈದ್ಯಕೀಯ ಸ್ಥಿತಿಯಾಗಿದ್ದು, ಇದು ದೇಹದಲ್ಲಿ ಅನಿಯಂತ್ರಿತವಾಗಿ ಕೆಲವು ಜೀವಕೋಶಗಳನ್ನು ಬೆಳೆ ಸಲು ಪ್ರಾರಂಭಿಸುತ್ತದೆ, ಅಂತಿಮವಾಗಿ ಅದು ದೇಹದ ಇತರೆ ಭಾಗಗಳಿಗೂ ಹರಡಲು ಮುಂದಾಗುತ್ತದೆ.

"Prevention is better than cure" ಎಂಬಂತೆ, ಕ್ಯಾನ್ಸರ್ ನಮ್ಮ ಬಳಿ ಸುಳಿಯದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳುವುದು ಅತೀ ಅಗತ್ಯ.ಇದಕ್ಕೆಂದೇ ನಿಯಮಿತವಾಗಿ ತಪಾಸಣೆ ಮಾಡಿಸುವುದು ಒಳಿತು. ಕ್ಯಾನ್ಸರ್‌ಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ವಿಶ್ವಾದ್ಯಂತ ಜನರಿಗೆ ಜಾಗೃತಿ ಮೂಡಿಸಲು ಹಾಗೂ ಈ ರೋಗಕ್ಕೆ ಸೂಕ್ತ ಔಷಧಿ ಕಂಡುಹಿಡಿಯಲು ಬೇಕಾದ ಸಂಶೋಧನೆಗಳ ಮೇಲೆ ಹೆಚ್ಚು ಗಮನ ಹರಿಸಲು ಪ್ರತಿ ವರ್ಷ ಆಗಸ್ಟ್ 01 ರಂದು ವಿಶ್ವ ಶ್ವಾಸಕೋಶದ ಕ್ಯಾನ್ಸರ್ ದಿನವನ್ನು ಆಚರಿಸಲಾಗುತ್ತದೆ. ಇದರ ಆಚರಣೆ 2012ರಿಂದ ಆರಂಭವಾಯಿತು.

ಶ್ವಾಸಕೋಶದ ಕ್ಯಾನ್ಸರ್ ಒಂದು ವಿಧದ ಕ್ಯಾನ್ಸರ್ ಆಗಿದ್ದು, ಅದು ಸೋಂಕಿತ ವ್ಯಕ್ತಿಯ ಶ್ವಾಸಕೋಶದ ಮೇಲೆ ಅಗಾಧ ಪರಿಣಾಮ ಬೀರುತ್ತದೆ. ಈ ರೋಗಕ್ಕೆ ಪ್ರಮುಖ ಕಾರಣ ಧೂಮಪಾನ. ಇತ್ತೀಚೆಗೆ ಈ ಕ್ಯಾನ್ಸರ್ ನಿಂದ ಹಲವರು ಸಾವಿಗೀಡಾಗಿದ್ದಾರೆ. ಈ ಸಮಸ್ಯೆ ಪುರುಷ ಮತ್ತು ಮಹಿಳೆ ಇಬ್ಬರಲ್ಲಿಯೂ ಕಾಣಿಸಿಕೊಳ್ಳುತ್ತಿದ್ದು, ಅದರಲ್ಲೂ ಧೂಮಪಾನಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ತಂಬಾಕಿನ ಹೊಗೆ ಸಾವಿರಾರು ರಾಸಾಯನಿಕಗಳನ್ನು ಹೊಂದಿರುತ್ತದೆ, ಅವುಗಳಲ್ಲಿ ಹಲವು ಕಾರ್ಸಿನೋಜೆನಿಕ್ (ಕ್ಯಾನ್ಸರ್ ಉಂಟುಮಾಡುವ) ಎಂಬ ರಾಸಾಯನಿಕಗಳನ್ನು ಉಸಿರಾಡಿದಾಗ, ಅವು ಶ್ವಾಸಕೋಶದ ಒಳಪದರದ ಜೀವಕೋಶಗಳನ್ನು ಹಾನಿಗೊಳಿಸಬಹುದು, ಅಂತಿಮ ವಾಗಿ ಕ್ಯಾನ್ಸರ್ ಕೋಶಗಳ ಅನಿಯಂತ್ರಿತ ಬೆಳವಣಿಗೆಗೆ ಕಾರಣವಾಗುತ್ತದೆ. ಶ್ವಾಸಕೋಶದ ಕ್ಯಾನ್ಸರ್ ವಿಶ್ವಾದ್ಯಂತ ಕ್ಯಾನ್ಸರ್ ಸಾವುಗಳಿಗೆ ಪ್ರಮುಖ ಕಾರಣವಾಗಿದೆ. ಕ್ಯಾನ್ಸರ್ ಬರೀ ಧೂಮಪಾನ, ಮದ್ಯಪಾನ ಹಾಗೂ ಗುಟ್ಕಾ ಸೇವಿಸು ವವರಿಗಷ್ಟೇ ಮಾತ್ರ ಬರುತ್ತದೆ ಎನ್ನುವುದು ಸುಳ್ಳು, ಅದು ಈಗ ನಾವು ಸೇವಿಸುವ ನೀರು ಹಾಗೂ ಆಹಾರದಿಂದಲೂ ಬಂದರೂ ಆಶ್ಚರ್ಯವಿಲ್ಲ. ಕ್ಯಾನ್ಸರ್ ಬಂದಾಗ, ನಮಗೆ ಆಹಾರ ಸೇವಿಸಲೂ ಕಷ್ಟವಾಗುವುದು. ನಾವು ತೀರಾ ಬಿಸಿಯಾದ ನೀರು ಹಾಗೂ ಆಹಾರವನ್ನು ಅಗತ್ಯಕ್ಕಿಂತ ಹೆಚ್ಚು ಸೇವಿಸಿದಾಗಲೂ ಈ ಬಗೆಯ ಕ್ಯಾನ್ಸರ್ ಬರುತ್ತದೆ.



**ಆಗಸ್ಟ್ 1 ವಿಶ್ವ ಶ್ವಾಸಕೋಶ ಕ್ಯಾನ್ಸರ್ ದಿನ**

**ರೋಗ ಲಕ್ಷಣಗಳು:**

ಶ್ವಾಸಕೋಶದ ಕ್ಯಾನ್ಸರ್ ನಿಂದ ಬಳಲುತ್ತಿರುವವರಿಗೆ ಆರಂಭಿಕ ಹಂತದಲ್ಲಿ ಯಾವುದೇ ರೋಗ ಲಕ್ಷಣಗಳು ಕಂಡುಬರದೇ ಇದ್ದರೂ ರೋಗವು ತೀವ್ರತರವಾದಾಗ ಈ ಕೆಳಗಿನ ಲಕ್ಷಣಗಳು ಗೋಚರಿಸುತ್ತವೆ.

* ನಿರಂತರವಾಗಿ ಕೆಮ್ಮುವುದು ಹಾಗೂ ಕೆಮ್ಮಿದಾಗ ರಕ್ತ ಬರುವುದು .
* ಉಸಿರಾಟದ ತೊಂದರೆ.
* ಉಬ್ಬಸ.
* ವಿಪರೀತ ತಲೆನೋವು.
* ದೇಹದ ತೂಕ ಕಡಿಮೆಯಾಗುವುದು
* ಹಸಿವು ಮತ್ತು ಆಯಾಸ
* ಮುಖ ಅಥವಾ ಕುತ್ತಿಗೆಯಲ್ಲಿ ಊತ
* ಎದೆ ನೋವು, ವಿಶೇಷವಾಗಿ ನಗುವಾಗ ಅಥವಾ ಆಳವಾದ ಉಸಿರನ್ನು ತೆಗೆದುಕೊಳ್ಳುವಾಗ.
* ಧ್ವನಿಯ ಕರ್ಕಶತೆ.
* ತ್ವಚೆಯಲ್ಲಿ ಬದಲಾವಣೆಯಾಗುವುದು.
* ಮಹಿಳೆಯರಲ್ಲಿ ಅಸಹಜ ರಕ್ತಸ್ರಾವ, ನೋವು ಮತ್ತು ಅಸ್ವಸ್ಥತೆ,
* ಮೂಳೆ ಹಾಗೂ ಕೀಲುಗಳ ನೋವು.
* ಮುಖ ಮತ್ತು ತೋಳುಗಳ ಉರಿಯೂತ ಹಾಗೂ ಮುಖದ ಪಾರ್ಶ್ವವಾಯು ಕೂಡ ಶ್ವಾಸಕೋಶದ ಕ್ಯಾನ್ಸರ್‌ನ ಲಕ್ಷಣವಾಗಿರಬಹುದು.

ಹೀಗಾಗಿ ಈ ರೀತಿಯ ಯಾವುದೇ ಲಕ್ಷಣಗಳು ಕಂಡುಬಂದಲ್ಲಿ ನಿರ್ಲಕ್ಷಿಸದೆ ಕೂಡಲೇ ವೈದ್ಯರನ್ನು ಸಂಪರ್ಕಿಸುವುದು ಒಳಿತು.

**ಸಂಭವನೀಯ ಚಿಕಿತ್ಸೆಗಳು :**

* ಶಸ್ತ್ರಚಿಕಿತ್ಸೆ.
* ಕೀಮೋಥೆರಪಿ ಮತ್ತು ವಿಕಿರಣ ಚಿಕಿತ್ಸೆ.
* ಇತರೆ ಆಯ್ಕೆಗಳಲ್ಲಿ ಉದ್ದೇಶಿತ ಚಿಕಿತ್ಸೆ.
* ಇಮ್ಯುನೋಥೆರಪಿ, ಲೇಸರ್, ಹಾರ್ಮೋನ್ ಥೆರಪಿ ಇತ್ಯಾದಿ.

**ರೋಗ ತಡೆಗಟ್ಟುವ ಬಗೆ :**

ಯಾವುದೇ ಬಗೆಯ ಕ್ಯಾನ್ಸರನ್ನು ತಡೆಗಟ್ಟಲು ಖಚಿತವಾದ ಮಾರ್ಗವಿಲ್ಲದಿದ್ದರೂ ಅಪಾಯದ ಮಟ್ಟವನ್ನು ತಕ್ಕಮಟ್ಟಿಗೆ ಕಡಿಮೆ ಮಾಡಿಕೊಳ್ಳಬಹುದು. ಅಂದರೆ

* ಹೆಚ್ಚು ಜನದಟ್ಟಣೆ ಪ್ರದೇಶಗಳಾದ ಮಾರುಕಟ್ಟೆ, ಬಸ್, ರೈಲು ಮತ್ತು ವಿಮಾನ ನಿಲ್ದಾಣಗಳಂತಹ ಅಧಿಕ ವಾಯುಮಾಲಿನ್ಯ ಇರುವ ಕಡೆ ಮಾಸ್ಕ್ ಧರಿಸುವುದು ಒಳ್ಳೆಯದು.
* ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳುವುದು.
* ನಿತ್ಯವೂ ವ್ಯಾಯಾಮ ಮಾಡುವುದು.
* ಆಲ್ಕೋಹಾಲ್ ಸೇವನೆಯನ್ನು ತ್ಯಜಿಸುವುದು.
* ಲೈಂಗಿಕವಾಗಿ ಹರಡುವ ಸೋಂಕುಗಳಿಂದ ರಕ್ಷಿಸಿಕೊಳ್ಳುವುದು.
* ನಿಯಮಿತವಾಗಿ ಸ್ಕ್ರೀನಿಂಗ್ ಪರೀಕ್ಷೆಗಳನ್ನು ಮಾಡಿಸಿಕೊಳ್ಳುವುದು.
* ಧೂಮಪಾನ ಮಾಡುವ ಅಭ್ಯಾಸ ಎಷ್ಟು ಹಾನಿಕಾರ ಕವೋ ಅಷ್ಟೇ ತೊಂದರೆ ಅದರ ಹೊಗೆಯನ್ನು ಸೇವಿಸು ವುದು. ಆದ್ದರಿಂದ ಆದಷ್ಟು ಅದರಿಂದ ದೂರವಿರು ವುದು.
* ಸಿಗರೇಟ್ ಸೇದುವವರ ಪಕ್ಕದಲ್ಲಿ ನಿಲ್ಲದಂತೆ ಎಚ್ಚರ ವಹಿಸುವುದು.
* ಆದಷ್ಟು ಧೂಳು ಮುಕ್ತ ಜಾಗದಲ್ಲಿ ಸಂಚರಿಸುವುದು.
* ಸುಟ್ಟ ಪ್ಲಾಸ್ಟಿಕ್ ನಿಂದ ಬರುವ ಹೊಗೆಯಿಂದ ಅಂತರ ಕಾಯ್ದುಕೊಳ್ಳುವುದು .
* ಕ್ಯಾನ್ಸರ್ ವಿರುದ್ಧ ಹೋರಾಡಲು ಬೆರ್ರಿ ಹಣ್ಣುಗಳು, ಕ್ರೂಸಿಫೆರಸ್ ತರಕಾರಿಗಳು, ಹೂಕೋಸು, ಎಲೆಕೋಸು, ಬ್ರಸೆಲ್ಸ್ ಮೊಗ್ಗುಗಳು, ಮೀನು, ದ್ವಿದಳ ಧಾನ್ಯಗಳು ಹಾಗೂ ಡಾರ್ಕ್ ಚಾಕೊಲೇಟ್‌ಗಳನ್ನು ಸೇವಿಸುವುದು ಉತ್ತಮ.

- ಡಾ. ಶಿವಯ್ಯ ಎಸ್.
ವಿಶ್ರಾಂತ ಪ್ರಾಧ್ಯಾಪಕರು , ದಾವಣಗೆರೆ.

# ಬಾಳಿನ ಭಾಗ್ಯೋದಯಕ್ಕೆ ಧರ್ಮದ ಬೆಳಕು : ರಂಭಾಪುರಿ ಜಗದ್ಗುರುಗಳು

(1ನೇ ಪುಟದಿಂದ) ಶ್ರಮದ ಕಾಯಕದಿಂದಲೇ ಚೈತನ್ಯ ಪ್ರಾಪ್ತಿಯಾಗುತ್ತದೆ. ಕ್ರಿಯಾಶೀಲ ಬದುಕು ಶ್ರೇಯಸ್ಸಿಗೆ ಕಾರಣ. ಬದುಕಿನ ಹಿರಿಮೆ ರಹಸ್ಯ ಬೋಧಿಸುವುದೇ ನಿಜವಾದ ಧರ್ಮ ಎಂದು ಹೇಳಿದರು.

ಉದಾತ್ತ ಜೀವನ ಮೌಲ್ಯಗಳನ್ನು ಸಂಪಾದಿಸಿಕೊಂಡು ಬಾಳಬೇಕೆಂದು ವೀರಶೈವ ಧರ್ಮ ನಿರೂಪಿಸಿದೆ. ಧರ್ಮ ಮತ್ತು ದರ್ಶನಗಳ ಅರಿವು ಪ್ರಾಪ್ತಿಯಾಗಲು ಶ್ರೀ ಗುರುವಿನ ಬೋಧಾಮೃತ ಅವಶ್ಯಕ. ಸತ್ಯ ಶುದ್ಧವಾದ ತತ್ವ, ಸಿದ್ಧಾಂತಗಳನ್ನು ಬೋಧಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಚಿಂತನೆಗಳನ್ನು ಅರಿತುಕೊಂಡು ಬಾಳಬೇಕು ಎಂದರು.

ಹಂಪಸಾಗರ ನವಲಿ ಹಿರೇಮಠದ ಶ್ರೀ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಹೊರಗಿನ ಕತ್ತಲೆ ಕಳೆಯಲು ಸೂರ್ಯನ ಬೆಳಕು ಬೇಕು. ಬದುಕಿನ ಅಜ್ಞಾನ ಕಳೆಯಲು ಗುರುವಿನ ಜ್ಞಾನ ಬೋಧಾಮೃತ ಬೇಕು. ವೀರಶೈವ ಧರ್ಮದಲ್ಲಿ ಅರಿವನ್ನು ನೀಡುವ ಗುರುವಿಗೆ ಮೊದಲ ಸ್ಥಾನ ಇದೆ ಎಂದರು.

ಕಾರ್ಯಕ್ರಮದ ನೇತೃತ್ವ ವಹಿಸಿದ ಮುಕ್ತಿಮಂದಿರ ಕ್ಷೇತ್ರದ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಬದುಕಿಗೆ ಭಗವಂತ ಕೊಟ್ಟ ಕೊಡುಗೆ ಅಪಾರ. ಅವನಂಥ ದಾನಿ ಇನ್ನೊಬ್ಬನಿಲ್ಲ. ಗುರು, ಧರ್ಮ, ದೇವರನ್ನು ಮರೆಯಬಾರದು ಎಂದರು.



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಪಂಚ ಪೀಠಗಳಲ್ಲಿ ಮಾನವ ಧರ್ಮಕ್ಕೆ ಜಯವಾಗಲಿ ಎನ್ನುವುದು ರಂಭಾಪುರಿ ಪೀಠ ಮಾತ್ರ. ಶ್ರೀಗಳ ಆಶೀರ್ವಾದ ಇಂದು ಜಗತ್ತಿಗೆ ಅತ್ಯಗತ್ಯವಾಗಿದೆ ಎಂದು ಹೇಳಿದರು.

ಬಿಜೆಪಿ ಮುಖಂಡರಾದ ಗಾಯತ್ರಿ ಸಿದ್ದೇಶ್ವರ ಮಾತನಾಡಿ, ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರ ತಿಳಿಸಿ, ಅವರನ್ನು ಜಾಗೃತಿಗೊಳಿಸಲು ಇಂತಹ ಕಾರ್ಯಕ್ರಮಗಳಿಂದ ಸಾಧ್ಯ ಎಂದರು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಇಂತಹ ಧರ್ಮ ಜಾಗೃತಿ ಸಮಾರಂಭಗಳಿಗೆ ಹಿರಿಯರು ಮಾತ್ರ ಆಗಮಿಸುತ್ತಿದ್ದಾರೆ. ಇದರ ಜೊತೆಗೆ ಶಾಲಾ-ಕಾಲೇಜು ವಿದ್ಯಾರ್ಥಿಗಳನ್ನು ಕರೆ ತರುವ ಅಗತ್ಯವಿದೆ. ಆಗ ಮಾತ್ರ ನಾಡಿನ ಪರಂಪರೆ ತಿಳಿಯುತ್ತದೆ ಎಂದರು.

'ಸಾಧನೆಯ ಶಿಖರ' ಪ್ರಶಸ್ತಿ ಸ್ವೀಕರಿಸಿದ, ಯುಪಿಎಸ್ಸಿಯಲ್ಲಿ 101ನೇ ರ್‍ಯಾಂಕ್ ಪಡೆದ ವಿದ್ಯಾರ್ಥಿನಿ ಕು. ಸೌಭಾಗ್ಯ ಬೀಳಗಿಮಠ ಮಾತನಾಡುತ್ತಾ, ಸಾಧನೆ ಸಾಧಕನ ಸೊತ್ತು. ಪ್ರತಿಯೊಬ್ಬರಲ್ಲೂ ಪ್ರತಿಭೆ ಇರುತ್ತದೆ. ಕಠಿಣ ಪರಿಶ್ರಮ, ಗುರಿಯೊಂದಿಗೆ ಮುನ್ನಡೆದಾಗ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಅದಕ್ಕೆ ಅತ್ಯಂತ ಬಡ ಕುಟುಂಬದಿಂದ ಬಂದ ನಾನೇ ಉದಾಹರಣೆ ಎಂದರು.

ಚನ್ನಗಿರಿ ಶ್ರೀ ಕೇದಾರ ಶಿವಶಾಂತವೀರ ಶಿವಾಚಾರ್ಯರು, ತಾವರೆಕೆರೆ ಶ್ರೀ ಡಾ. ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಬಿಜೆಪಿ ರಾಜ್ಯ ಮಹಿಳಾ ಘಟಕದ ಉಪಾಧ್ಯಕ್ಷೆ ಹೆಚ್.ಸಿ.ಜಯಮ್ಮ, ಕಾಂಗ್ರೆಸ್ ಮುಖಂಡ ಎ. ನಾಗರಾಜ್ ಉಪಸ್ಥಿತರಿದ್ದರು.

ಎಸ್.ಜೆ.ವಿ.ಪಿ.ಕಾಲೇಜು ಉಪಾಧ್ಯಕ್ಷ ಡಿ.ಎಂ.ಹಾಲಸ್ವಾಮಿ, ನಿರ್ದೇಶಕ ಎನ್.ಎಚ್. ಪಾಟೀಲ್, ಅಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಶಂಭು ಉರೇಕೊಂಡಿ, ಬಿ.ಜೆ.ರಮೇಶ್, ಎಂ.ಗುಡ್ಡಪ್ಪ, ಮಾಗಾನಹಳ್ಳಿ ಗಿರೀಶ್, ಎಂ.ಬಸವರಾಜ್, ಚನ್ನವೀರಸ್ವಾಮಿ ಇತರರು ಗುರುರಕ್ಷೆ ಪಡೆದರು.

ಬಾಳೆಹೊನ್ನೂರಿನಲ್ಲಿ ನಿರ್ಮಿಸುತ್ತಿರುವ ರೇಣುಕಾಚಾರ್ಯರ ಪ್ರತಿಮೆ ನಿರ್ಮಾಣಕ್ಕೆ ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ಸಹೋದರರು 15 ಲಕ್ಷ ರೂ. ದೇಣಿಗೆ ನೀಡುವುದಾಗಿ ಹೇಳಿದ್ದಾರೆ ಎಂದು ದೇವರಮನೆ ಶಿವಕುಮಾರ್ ಹೇಳಿದರು.

ಡಿ.ವಿ.ಆರಾಧ್ಯಮಠ ಸ್ವಾಗತಿಸಿದರು. ಗುರುಶಾಂತ ಸೋಗಿ ಶ್ರೀ ರಂಭಾಪುರಿ ಜಗದ್ಗುರುಗಳಿಗೆ ಗೌರವ ಮಾಲಾರ್ಪಣೆ ಸಲ್ಲಿಸಿದರು. ಪುಷ್ಪಾ ವಾಲಿ ನಿರೂಪಿಸಿದರು.

## ಜುಲೈನಲ್ಲಿ 1.82 ಲಕ್ಷ ಕೋಟಿ ರೂ. ಜಿಎಸ್‌ಟಿ ಸಂಗ್ರಹ

ನವದೆಹಲಿ, ಆ.1 - ಜುಲೈ ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹ ಶೇ.10.3ರಷ್ಟು ಹೆಚ್ಚಾಗಿ 1.82 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಜಿ.ಎಸ್.ಟಿ. ಜಾರಿಗೆ ಬಂದ ನಂತರ ಇದು ಮೂರನೇ ಅತಿ ಹೆಚ್ಚಿನ ತೆರಿಗೆ ಸಂಗ್ರಹವಾಗಿದೆ.

ಏಪ್ರಿಲ್ 2024ರಲ್ಲಿ ಜಿ.ಎಸ್.ಟಿ. ಸಂಗ್ರಹ ದಾಖಲೆಯ 2.10 ಲಕ್ಷ ಕೋಟಿ ರೂ.ಗಳಿಗೆ ತಲುಪಿತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ ಒಟ್ಟು 7.39 ಲಕ್ಷ ಕೋಟಿ ರೂ. ತೆರಿಗೆ ಸಂಗ್ರಹಿಸಲಾಗಿದೆ.

## ತಂಬಾಕು, ಮದ್ಯದ ಜಾಹೀರಾತು ತಡೆಗಾಗಿ ಬಿಸಿಸಿಐಗೆ ಕೇಂದ್ರದ ಸೂಚನೆ

ನವದೆಹಲಿ, ಆ. 1 - ಕ್ರೀಡಾಪಟುಗಳು ತಂಬಾಕು ಹಾಗೂ ಮದ್ಯದ ಪರೋಕ್ಷ ಜಾಹಿರಾತುಗಳಲ್ಲಿ ಭಾಗಿಯಾಗುವುದನ್ನು ತಡೆಯುವಂತೆ ಬಿ.ಸಿ.ಸಿ.ಐ.ಗೆ ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕ್ರೀಡಾಪಟುಗಳು ಅದರಲ್ಲೂ ಕ್ರಿಕೆಟಿಗರು ಜನತೆಗೆ ಆದರ್ಶವಾಗಿದ್ದಾರೆ. ಕ್ರೀಡಾಪಟುಗಳು ತಂಬಾಕು ಹಾಗೂ ಮದ್ಯದ ಉತ್ಪನ್ನಗಳ ಪ್ರಚಾರದಲ್ಲಿ ತೊಡಗುವುದು ನಿರಾಶಾದಾಯಕ ಎಂದು ಸಚಿವಾಲಯ ಹೇಳಿದೆ.

ಕ್ರೀಡಾಪಟುಗಳು ತಂಬಾಕು ಮತ್ತು ಮದ್ಯದ ಪರೋಕ್ಷ ಜಾಹೀರಾತುಗಳಲ್ಲಿ ಭಾಗಿಯಾಗುವುದನ್ನು ತಡೆಯಲು ಬಿ.ಸಿ.ಸಿ.ಐ. ಸಕಾರಾತ್ಮಕ ಕ್ರಮಗಳನ್ನು ಪರಿಶೀಲಸಲಿ ಎಂದು ಸಚಿವಾಲಯ ತಿಳಿಸಿದೆ.


**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
30x40 North, 40 ಅಡಿ ರೋಡಿಗಿದೆ MBA ಕಾಲೇಜ್ ರೋಡಿಗೆ 30x40 East, ಜೆ.ಹೆಚ್. ಪಟೇಲ್ ಬಡಾವಣೆ, 22 1/2x40 South, ಭಗೀರಥ ಸರ್ಕಲ್ ಹತ್ತಿರ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತಮುತ್ತ ಹೊಸ ಬಡಾವಣೆಗಳಲ್ಲಿ 30x46 ಪಶ್ಚಿಮ ಅಕ್ಕ-ಪಕ್ಕ, 30x45 ಪೂರ್ವ ಅಕ್ಕ-ಪಕ್ಕ, 30x40 ಪಶ್ಚಿಮ, 30x50 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 4 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರ ಸಭೆ ಡೋ. ನಂ. ಬ್ಯಾಂಕ್ ಸಾಲ ಸೌಲಭ್ಯವಿರುವ ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸೆಲ್ ಕಟ್ಟಲು ಅನುಭವವುಳ್ಳ ಯುವಕರು ಬೇಕಾಗಿದ್ದಾರೆ. ಗರಿಷ್ಠ ವೇತನ ನೀಡಲಾಗುವುದು.
89700 08040

**ಡ್ರೈವರ್ ಬೇಕಾಗಿದ್ದಾರೆ**
ವೈಟ್ ಬೋರ್ಡ್ ಕಾರ್ ಡ್ರೈವಿಂಗ್ ಮಾಡಲು ಡಿ.ಎಲ್. ಹೊಂದಿರುವ ಡ್ರೈವರ್ ಬೇಕಾಗಿದ್ದಾರೆ.
95917 25892

**Property Hub**
• EC
• E-swathu
• Building Licence
• Khatha Change
96118 66449

**WANTED**
B.Com / BA / PUC ಆಗಿ ಕನ್ನಡ ಟೈಪಿಂಗ್ ಬರುವ ಹುಡುಗಿ / ಮಹಿಳೆ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
96325 54524

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಕಲೆಕ್ಷನ್ ಬಾಯ್ ಆಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಬಯೋಡೇಟಾ ಮತ್ತು ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ನವೋದಯ ಚಿಟ್ ಫಂಡ್ಸ್, ನಂ. 34, ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ಸರ್ಕಲ್ ಹತ್ತಿರ, ದಾವಣಗೆರೆ.

**ಸಪ್ಲೈಯರ್ಸ್ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**
ಊಟ + ವಸತಿ ಉಚಿತ
ಸಾನ್ವಿ ರೆಸ್ಟೋರೆಂಟ್
ಹೈ-ಟೆಕ್ ಹಾಸ್ಪಿಟಲ್ ರೋಡ್, ಲಕ್ಷ್ಮಿ ಲೇಔಟ್, ದಾವಣಗೆರೆ.
90197 23292, 70222 20554

**ಗೋಡೌನ್ ಬಾಡಿಗೆಗೆ**
'ಶ್ರೀ ವೆಂಕಟೇಶ್ವರ ರೈಸ್ ಮಿಲ್' ಚನ್ನಗಿರಿ ರಸ್ತೆಯಲ್ಲಿರುವ ತ್ಯಾವಣಿಗಿ ಹತ್ತಿರ ರೋಡ್ ಪಕ್ಕದಲ್ಲಿರುವ 64HB Power ಇರುವ 84x88 ಗೋಡೌನ್ ಬಾಡಿಗೆಗಿದೆ. ಉಪಯೋಗ : ಮೆಕ್ಕೆಜೋಳ, ಅಡಿಕೆ ಪ್ಲೇಟ್ ತಯಾರು ಮಾಡಲು ಕಣ / ಗೋಡೌನ್ ಬಾಡಿಗೆಗಿದೆ.
99451 59582

**ಬೇಕಾಗಿದ್ದಾರೆ**
ದಾವಣಗೆರೆಯ ಶುದ್ಧ ಸಸ್ಯಹಾರಿ ರೆಸ್ಟೋರೆಂಟ್‌ನಲ್ಲಿ ತಂದೂರಿ ಕುಕ್, ಚೈನೀಸ್ ಕುಕ್ ಮತ್ತು ವೇಟರ್ಸ್ ಇಬ್ಬರು ಕೆಲಸಕ್ಕೆ ಬೇಕಾಗಿದ್ದಾರೆ ಸಂಪರ್ಕಿಸಿ :
63637 39571

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 North, 40x60 North, 120 ಅಡಿ ರೋಡಿಗಿದೆ, 50x80 East, 40x60 North, 40x60 East, 30x50 West. ಪಾರ್ಕ್ ಟೆಂಟ್ ಎದುರುಗಡೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬ್ಲಾಂಕ್ ಚೆಕ್ ಲೀಫ್‌ಗಳು ಕಳೆದಿವೆ**
ಜಿ.ಎಸ್. ರವಿಕುಮಾರ್ ಹೆಸರಿನಲ್ಲಿರುವ ಆಧಾರ್ ಕಾರ್ಡ್, ಪಾನ್ ಕಾರ್ಡ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿಜಲಿಂಗಪ್ಪ ಲೇಔಟ್ ಬ್ರಾಂಚ್‌ನ SB A/c ನ ಸಹಿಯಾಗಿರುವ ಬ್ಲಾಂಕ್ ಚೆಕ್ ಲೀಫ್‌ಗಳು ನಂ. 665338 ಮತ್ತು 665337ಗಳು ದಿನಾಂಕ : 23.05.2024ರ 11.00 ಗಂಟೆಗೆ ಕುರುಬರ ಕೇರಿಯಲ್ಲಿ ಕಳೆದಿವೆ. ಸಿಕ್ಕವರು ಹತ್ತಿರದ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಫೋನ್‌ಗೆ ತಿಳಿಸಿ.
97397 78746

**ಬೇಕಾಗಿದ್ದಾರೆ**
ಡ್ರೈವರ್, ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ.
97415 59757
88845 95873

**ವಿಲ್ಲಾ ಸೈಟುಗಳು ಮಾರಾಟಕ್ಕಿವೆ**
ವಿಲ್ಲಾ ಸೈಟುಗಳು, ಫಾರ್ಮ್‌ಹೌಸ್ ಸೈಟುಗಳು ಅತ್ಯಂತ ಕಡಿಮೆ ದರದಲ್ಲಿ ಮಾರಾಟಕ್ಕಿವೆ. 500/- sq.ft ಮಾತ್ರ, ಹರಪನಹಳ್ಳಿ ರಸ್ತೆ, ಮಾಗಾನಹಳ್ಳಿ ಹತ್ತಿರ, ದಾವಣಗೆರೆಯಿಂದ 5 ಕಿ.ಮೀ. ದೂರ.
9591974763, 7892568692

**ಮನೆ ಬಾಡಿಗೆಗೆ ಇದೆ**
ಎಲ್ಲಾ ಸೌಕರ್ಯ, ಉತ್ತರಕ್ಕೆ ಬಾಗಿಲಿರುವ, ವಾಸ್ತುವುಳ್ಳ 1ನೇ ಮಹಡಿ, ಡಬಲ್ ಬೆಡ್ ರೂಂ ಮನೆ, ಬಾಡಿಗೆಗಿದೆ. #1859/34, "ಭಾವ ಸಂಗಮ" 4ನೇ ಮೇನ್, LIC ಕಾಲೋನಿ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ-4.
9448746875, 8050357533

**ಮನೆ ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನ ಹತ್ತಿರ, ಸುಕೋ ಬ್ಯಾಂಕ್ ಹಿಂಭಾಗ, ದಾವಣಗೆರೆ. 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ.
98454 66995

**ಮನೆ ಬಾಡಿಗೆಗೆ**
2BHK-1st / 2nd Floor, 3ನೇ ಮೇನ್, 16ನೇ ಕ್ರಾಸ್, ಕೆಟಿಜೆ ನಗರ, ದಾವಣಗೆರೆ. 1BHK-1st Floor, 1ನೇ ಮೇನ್, 4ನೇ ಕ್ರಾಸ್, ಪ್ರಶಾಂತ್ ನಗರ, ಹರಿಹರ.
91774 21966

**ರಜತ ENT ಅಲರ್ಜಿ ಕ್ಲಿನಿಕ್**
Hearing Aids Available
ನಮ್ಮಲ್ಲಿ ನೂತನ ಮಾದರಿಯ ಹಾಗೂ ರಿಯಾಯಿತಿ ದರದಲ್ಲಿ ಕಿವಿಯ ಶ್ರವಣ ಸಾಧನವನ್ನು ವಿತರಿಸಲಾಗುವುದು. ಕಿವಿ ಕೇಳಿಸುವುದು ಕಡಿಮೆಯಾದವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ :
ರಜತ ಇಎಸ್‌ಟಿ ಸ್ಪೇಷಾಲಿಟಿ ಸೆಂಟರ್
ವಿಘ್ನೇಶ್ವರ 427, 8ನೇ ಕ್ರಾಸ್, 4ನೇ ಮೇನ್, ಪಿ.ಜೆ. ಬಡಾವಣೆ (ಬ್ಯಾಡಗಿ ಶೆಟ್ರು ಸ್ಕೂಲ್ ಎದುರು) ದಾವಣಗೆರೆ- 577002.
99002 26925

**ಫ್ಲಾಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ಮಾರಾಟಕ್ಕಿವೆ.
ಬಿ.ಎಸ್. ಸಂತೋಷ
96322 67555

**ಬೇಕಾಗಿದ್ದಾರೆ**
ಬ್ಯಾಂಕಿಂಗ್ ಸೆಕ್ಟರ್‌ನಲ್ಲಿ ಕೆಲಸ ಮಾಡಲು ಟೆಲಿ ಕಾಲರ್ಸ್ ಬೇಕಾಗಿದ್ದಾರೆ. ಉತ್ತಮ ವೇತನ ಮತ್ತು ಇನ್ಸೆಂಟಿವ್ಸ್ ಕೊಡಲಾಗುತ್ತದೆ.
80885 58359

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರಸ್ತೆ, ದಾವಣಗೆರೆ. ಸಂಪರ್ಕಿಸಿ :
89048 09492

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು Sales Girls ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 1

**ಬೇಕಾಗಿದ್ದಾರೆ**
ಗ್ಯಾಸ್ ಏಜೆನ್ಸಿಯಲ್ಲಿ ಕೆಲಸ ಮಾಡಲು ಸ್ಟಾಫ್ ಬೇಕಾಗಿದ್ದಾರೆ.
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಎಂಸಿಸಿ ಬಿ ಬ್ಲಾಕ್, ಕುವೆಂಪು ನಗರ, ದಾವಣಗೆರೆ.
78992 47347

**ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ ಕೆಲಸ ಮಾಡಲು ಪಿಯುಸಿ ಆಗಿರುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
99724 84418, 90365 59955

**Tele Caller (ladies)**
(Attractive Salary + incentives)
89700 66666

**ಬೇಕಾಗಿದ್ದಾರೆ**
ಟೆಲಿಕಾಲರ್ ಮಹಿಳೆಯರು ಸಹಾಯಕಿಯರು, ಪಾರ್ಟ್‌ಟೈಂ ಜಾಬ್ ಮಹಿಳೆಯರು ಬೇಕಾಗಿದ್ದಾರೆ.
79750 23609

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
ಹರಿಹರ-ಮಲೇಬೆನ್ನೂರು, ಶಿವಮೊಗ್ಗ ರಸ್ತೆಗೆ 1 ಎಕರೆಯಿಂದ 25 ಎಕರೆವರೆಗೆ
ಶರ್ಮಾ, 63608 66997

**PUVM ACADEMY (R.)**
Require Spoken English Female Teacher
Salary 6000k
Part time job
time 6.00pm to 8.00pm
95350 51843

**ಸೈಟುಗಳು ಅತ್ಯಂತ ಕಡಿಮೆ ದರದಲ್ಲಿ ಮಾರಾಟಕ್ಕಿವೆ**
850/- sq.ft ಮಾತ್ರ, ಅಂತಿಮ ಅನುಮೋದನೆಯಾದ ಲೇಔಟ್, ಮಾಗಾನಹಳ್ಳಿ ರಸ್ತೆ, ಅಮೃತ ನಗರ ಹತ್ತಿರ, ದಾವಣಗೆರೆಯಿಂದ 4 ಕಿ.ಮೀ. ದೂರ.
9591974736, 7892568692

**ಬೇಕಾಗಿದ್ದಾರೆ**
ಕಾಫಿ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ. ಪುರುಷ ಅಭ್ಯರ್ಥಿಗಳು ಮಾತ್ರ ಸಂಪರ್ಕಿಸಿ
ಎ.ಎನ್.ಎಸ್. ಫುಡ್ಸ್
ಮಂಡಿಪೇಟೆ, ದಾವಣಗೆರೆ.
94482 72734

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**CHANGE OF NAME**
I Vargavara Dundyappa Beerappa S/o Dundyappa 47 Years resident @ Hadadi Village, Davangere Tq/Dist. above said my name is correct accordingly in my Aadhar Card. But my name wrongly mentioned in my SB A/c with union Bank of India my name has been mentioned as H.D. Beeresh. Above said two names are me only none one else. In future all my records and transactions will be using my name as Vargavara Dundyappa Beerappa sworn before Notary Davangere on 30.07.2024

**ಬೇಕಾಗಿದ್ದಾರೆ**
ಋತು ಸಲ್ಯೂಷನ್ಸ್
ದಾವಣಗೆರೆಗೆ Field Executive / ಆಫೀಸ್ Staff ಬೇಕಾಗಿದ್ದು, ಅಭ್ಯರ್ಥಿಗಳು ಬೇಸಿಕ್ ಕಂಪ್ಯೂಟರ್ ಜ್ಞಾನ ಹಾಗೂ ಬೈಕ್ ಹೊಂದಿರಬೇಕು.
Quali : PUC / Degree/Diploma
ಸಂದರ್ಶನ : ದಿನಾಂಕ : 4.8.2024 ಭಾನುವಾರ ಸಮಯ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2.30.
Salary & TA/DA
As per company standard.
ಸಂಪರ್ಕಿಸಿ.
63669 76661

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

SPBVS
**AKSHAR ENGLISH HIGHER PRIMARY SCHOOL T.C LAYOUT DAVANGERE**
**WANTED TEACHERS**
K.G. Classes-any Degree/D.Ed., 1st to 8th Std-Hindi & Computer Coding (B.A. B.Sc., B.Ed.,)
9731100216, 9844256380

**3 BHK HOUSE FOR RENT/LEASE**
At Uttam Badavane, 1st main, B ward No - 30, Avaragere Road. Contact :
99015 64535
94498 04535

**ಬೇಕಾಗಿದ್ದಾರೆ**
ವಾಟರ್ ಪ್ಯೂರಿಫೈರ್ ಸರ್ವೀಸ್ ಮಾಡಲು ಬೆಂಗಳೂರಿಗೆ ಹುಡುಗರು ಬೇಕಾಗಿದ್ದಾರೆ. ಓದಲು, ಬರೆಯಲು ಬರಬೇಕು. ವಯಸ್ಸು 18 ರಿಂದ 30 ಸಂಬಳ 20,000+ಪೆಟ್ರೋಲ್, ವಸತಿ
98453 44346

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ.7.8.2024ರ ಬುಧವಾರ ದಿ.8.8.2024ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

# ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಹೆಚ್ಚಿನ ಮಳೆ

ನವದೆಹಲಿ, ಆ. 1 - ಬರುವ ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ಭಾರತದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಪ್ರಸಕ್ತ ಲಾ ನೀನಾ ಪರಿಸ್ಥಿತಿ ಉಂಟಾಗಿದ್ದು, ಇದು ಉತ್ತಮ ಮಳೆಗೆ ಅನುಕೂಲಕರವಾಗಿದೆ ಎಂದು ಹವಾಮಾನ ಇಲಾಖೆಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ದೀರ್ಘಾವಧಿ ಸರಾಸರಿಯ ಶೇ.106ರಷ್ಟು ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ದೇಶದಲ್ಲಿ ಜೂನ್ 1ರ ನಂತರ ವಾಡಿಕೆಗಿಂತ ಶೇ.2ರಷ್ಟು ಹೆಚ್ಚು ಮಳೆಯಾಗಿದೆ. ಇದುವರೆಗೂ ವಾಡಿಕೆಯ ಮಳೆ ಪ್ರಮಾಣ 445.8 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ 453.8 ಮಿ.ಮೀ. ಮಳೆ ಸುರಿದಿದೆ.

ದೇಶದ ಬಹುತೇಕ ಭಾಗಗಳಲ್ಲಿ ಮುಂದಿನ ಎರಡು ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ.

ಆದರೆ, ದೇಶದ ಪೂರ್ವ ಭಾಗ, ಲಡಾಖ್, ಸೌರಾಷ್ಟ್ರ ಹಾಗೂ ಕಚ್ ಭಾಗದಲ್ಲಿ ಮಳೆ ವಾಡಿಕೆಗಿಂತ ಕಡಿಮೆ ಇರಲಿದೆ. ಮಧ್ಯ ಹಾಗೂ ಪ್ರಸ್ಥಭೂಮಿಯ ಕೆಲವೆಡೆ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆಯ ಮುಖ್ಯಸ್ಥ ಮೃತ್ಯುಂಜಯ ಮೊಹಾಪಾತ್ರ ಹೇಳಿದ್ದಾರೆ.

ಆಗಸ್ಟ್ ಹಾಗೂ ಸೆಪ್ಟೆಂಬರ್ ಅವಧಿಯಲ್ಲಿ ಪಶ್ಚಿಮ ಹಿಮಾಲಯ ಭಾಗದಲ್ಲಿ ಮಳೆಯ ಕೊರತೆಯಾಗಲಿದೆ ಎಂದೂ ಅವರು ಹೇಳಿದ್ದಾರೆ.

# ಮಕ್ಕಳಿಗೆ ಶಿಕ್ಷಣ ನೀಡಬೇಕಾಗಿರುವುದು ಸರ್ಕಾರದ ಜವಾಬ್ದಾರಿ

## ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಸಮಾರಂಭದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್

ದಾವಣಗೆರೆ, ಆ. 1 - ದೇಶದಲ್ಲಿ 14 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ನೀಡಬೇಕೆಂಬುದು ಸಂವಿಧಾನ ಬದ್ಧತೆಯ ಆಶಯವಾಗಿದ್ದು, ಅದನ್ನು ಕಾರ್ಯ ರೂಪಕ್ಕೆ ತರಬೇಕಾದದ್ದು ಆಳುವವರ ಜವಾಬ್ದಾರಿಯೆಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ತಿಳಿಸಿದರು.



ನಗರದ ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ, ರಗ್ಗು, ಹೊದಿಕೆ ಇತರೆ ಸಾಮಗ್ರಿ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಇಂದು ಅಭೂತಪೂರ್ವ ಬದಲಾವಣೆ ತಂದಿದ್ದು, ಶಿಕ್ಷಣದಿಂದ ದೂರವಿದ್ದಂತಹ ಪರಿಶಿಷ್ಟ ಮಕ್ಕಳೂ ಈಗ ಶೈಕ್ಷಣಿಕ ಸಾಧನೆ ಮಾಡುತ್ತಿರುವುದು ಗಮನಾರ್ಹ ಎಂದರು.

ಸಮುದಾಯವೂ ಇಂತಹ ಶೈಕ್ಷಣಿಕ ಕಾರ್ಯಕ್ಕೆ ಕೈಜೋಡಿಸಬೇಕು. ಹಿರಿಯರು, ದಾನಿಗಳು, ಸಮಾಜದ ಮುಖಂಡರ ನೆರವಿನಿಂದ ಇಂತಹ ಕಾರ್ಯ ಕೈಗೊಂಡಿದ್ದು ಇತರರಿಗೂ ಪ್ರೇರಣೆಯಾಗಿದೆ. ಮಕ್ಕಳ ಭವಿಷ್ಯ ಬೇರೆ ಯಾರ ಕೈಯ್ಯಲ್ಲೂ ಇಲ್ಲ. ಪ್ರತಿಯೊಬ್ಬ ವಿದ್ಯಾರ್ಥಿ-ವಿದ್ಯಾರ್ಥಿನಿಯರೂ ತಮ್ಮ ಭವಿಷ್ಯ ತಮ್ಮ ಕೈಯ್ಯಲ್ಲೇ ಇದೆಯೆಂಬುದನ್ನು ಅರ್ಥ ಮಾಡಿಕೊಂಡು, ಉನ್ನತ ಸಾಧನೆ ಮಾಡಬೇಕು ಎಂದು ಅವರು ಕರೆ ನೀಡಿದರು.

ಸಂಘದ ಕಾರ್ಯದರ್ಶಿ ಬಿ.ಎಚ್. ವೀರಭದ್ರಪ್ಪ ಮಾತನಾಡಿ, ಹರಿಜನ ಸಮಾಜದ ಮಕ್ಕಳಿಗೆ ಶಿಕ್ಷಣ ನೀಡಬೇಕೆಂಬ ಸಂಕಲ್ಪದೊಂದಿಗೆ ಇಲ್ಲಿನ ಹಿರಿಯರಿಗೆ ಷರತ್ತು ವಿಧಿಸಿ, ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ 1934ರಲ್ಲಿ ದಾವಣಗೆರೆಗೆ ರಾಷ್ಟ್ರಪಿತ ಮಹಾತ್ಮ ಗಾಂಧಿ ಬಂದಿದ್ದರು. ಅಂದು ಗಾಂಧೀಜಿ ಚೌಕಾಕಾರದಲ್ಲಿ ಸಾಗಿದ ಜಾಗವೇ ಇಂದು ಸಂಸ್ಥೆಯ ಕಾಂಪೌಂಡ್ ಇರುವ ಜಾಗ. ಅಷ್ಟೂ ಜಾಗವನ್ನು ಹರಿಜನರ ಮಕ್ಕಳ ಶೈಕ್ಷಣಿಕ ಕಾರ್ಯಕ್ಕಾಗಿ ಕೊಡಿಸಿದ ಮಹಾತ್ಮ ಗಾಂಧೀಜಿ ಸಂಕಲ್ಪ ಸಾಕಾರಗೊಳ್ಳುತ್ತಿದೆ ಎಂದರು.

ಕೆಪಿಸಿಸಿ ಉಪಾಧ್ಯಕ್ಷ ಎಸ್.ವಿಜಯಕುಮಾರ್, ಸಂಘದ ಅಧ್ಯಕ್ಷ ಎಲ್.ಎಂ.ಹನುಮಂತಪ್ಪ, ಉಪಾಧ್ಯಕ್ಷ ಬಿ.ಎಂ.ರಾಮಸ್ವಾಮಿ, ಜಂಟಿ ಕಾರ್ಯದರ್ಶಿ, ಹಿರಿಯ ಪತ್ರಕರ್ತ ಕೆ.ಚಂದ್ರಣ್ಣ, ಸದಸ್ಯರಾದ ಗಂಗಾಧರಪ್ಪ, ಬಿ.ಎಂ.ಈಶ್ವರಪ್ಪ, ಎಲ್.ಎಂ.ಎಚ್. ಸಾಗರ್, ಹಿರಿಯ ವಕೀಲ ಮಂಜಪ್ಪ ಹಲಗೇರಿ, ನಾಗರಾಜಪ್ಪ ಆದಾಪುರ, ಜಿ.ಎನ್.ಸಂತೋಷ, ಯುವ ಮುಖಂಡ ರಾಕೇಶ ಇತರರು ಇದ್ದರು.

ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್.ಬಡದಾಳ್, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಅವರುಗಳನ್ನು ಸಂಸ್ಥೆ ಪರವಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಸನ್ಮಾನಿಸಿದರು.



# ಸರ್.ಎಂ.ವಿ. ಕಾಲೇಜು ಸ್ಥಳಾಂತರಕ್ಕೆ ಸ್ಥಳೀಯ ಹಿರಿಯ ನಾಗರಿಕರ ಮನವಿ

ದಾವಣಗೆರೆ, ಆ. 1- ಸ್ಥಳೀಯ ನಿವಾಸಿಗಳಿಗೆ ಕಿರಿಕಿರಿ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಶಿವಕುಮಾರಸ್ವಾಮಿ ಬಡಾವಣೆ ಒಂದನೇ ಹಂತದಲ್ಲಿರುವ ಸರ್.ಎಂ.ವಿ. ಕಾಲೇಜನ್ನು ಸ್ಥಳಾಂತರ ಮಾಡುವಂತೆ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ನಿರ್ದೇಶಕರಿಗೆ ಪಿಯು ಡಿಡಿ ಮೂಲಕ ಮನವಿ ಸಲ್ಲಿಸಿದರು.

ಸಣ್ಣ ಮಕ್ಕಳು, ವಯೋವೃದ್ಧರು, ಮಹಿಳೆಯರು, ವಿದ್ಯಾರ್ಥಿಗಳು ಸರಾಗವಾಗಿ ಓಡಾಡಲು ಆಗುತ್ತಿಲ್ಲ. ಎಲ್ಲಿ ನೋಡಿದರೂ ವಿದ್ಯಾರ್ಥಿಗಳ ಗುಂಪು, ಗಲಾಟೆ, ಶಬ್ಧ, ಧೂಳಿನಿಂದ ಕೂಡಿದ ವಾತಾವರಣ ಇದೆ. ಕಾಲೇಜು ಎದುರಿಗೆ ಹದಡಿ ಮುಖ್ಯ ರಸ್ತೆಯಿಂದ ಎರಡೂ ಬದಿಗಳಲ್ಲಿ ಬ್ಯಾಂಕ್, ಆಸ್ಪತ್ರೆ, ಮಾರ್ಟ್‌ಗಳಿದ್ದು, ಕಾಲೇಜಿನ ವಿದ್ಯಾರ್ಥಿಗಳು ಮತ್ತು ಪೋಷಕರು ಕಾಲೇಜಿನ ಅಕ್ಕಪಕ್ಕದಲ್ಲಿರುವ ಮನೆಗಳ ಮುಂದೆ, ಖಾಲಿ ಸೈಟುಗಳಲ್ಲಿ, ಓಡಾಡುವ ರಸ್ತೆ ಮುಂದೆ ವಾಹನಗಳನ್ನು ನಿಲ್ಲಿಸಿಕೊಂಡು ಸಂಚಾರಕ್ಕೂ ಅಡ್ಡಿ ಉಂಟು ಮಾಡುತ್ತಿದ್ದಾರೆ. ಇಷ್ಟಲ್ಲದೇ ಗುಟ್ಕಾ ತಿಂದು ಎಲ್ಲೆಂದರಲ್ಲಿ ಉಗಿಯುವುದು, ಸೀಗರೇಟ್ ಸೇದುವುದು, ತಿಂಡಿ ಪದಾರ್ಥಗಳನ್ನು ತಿಂದು ಎಲ್ಲೆಂದರಲ್ಲಿ ಖಾಲಿ ಪಾಕೆಟ್‌ಗಳನ್ನು ಎಸೆಯುತ್ತಿದ್ದಾರೆ ಎಂದು ದೂರಿದ್ದಾರೆ.

ಕೂಡಲೇ ಕಾಲೇಜು ಸ್ಥಳಾಂತರ ಮಾಡಿ, ಈ ಭಾಗದ ನಾಗರಿಕರು ಆರೋಗ್ಯ, ನೆಮ್ಮದಿಯಿಂದ ಬದುಕಲು ಅವಕಾಶ ನೀಡುವಂತೆ ನಾಗರಿಕರು ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಕೆ.ಹೆಚ್.ಲೋಕೇಶ್, ಡಿ. ರವೀಂದ್ರ, ಪಿ.ಆರ್. ದಿನೇಶ್, ರಾಮಚಂದ್ರ ಶೆಟ್ರು, ನೀಲಕಂಠಪ್ಪ, ವಿರೂಪಾಕ್ಷಪ್ಪ, ಕೆ.ಎಸ್. ಸತೀಶ್, ಅಂಕಿತ್ ಮತ್ತಿತರರಿದ್ದರು.

# ನಗರದಲ್ಲಿ ಇಂದು ಶ್ರೀ ಶಿವಾನಂದ ತೀರ್ಥಗುರುಗಳ ಜಯಂತ್ಯೋತ್ಸವ

ಜಯದೇವ ಸರ್ಕಲ್‌ನಲ್ಲಿರುವ ಶ್ರೀ ಶಿವಾನಂದ ತೀರ್ಥಗುರು ಆಧ್ಯಾತ್ಮ ಮಂದಿರದಲ್ಲಿ (ಶ್ರೀಗರು ದತ್ತಾತ್ರೇಯ ದೇವಾಲಯ) ಶ್ರೀಮತ್ಪರಮಹಂಸೇತ್ಯಾದಿ ಶ್ರೀ ಶಿವಾನಂದ ತೀರ್ಥಗುರುಗಳವರ ಜಯಂತ್ಯೋತ್ಸವ ಇಂದು ನಡೆಯಲಿದೆ.

ಬೆಳಿಗ್ಗೆ 6ಕ್ಕೆ ಶ್ರೀ ಗುರುಗಳವರ ಪಾದುಕೆಗೆ ಕಾಕಡಾರತಿ, ಮಂಗಳಸ್ನಾನ, ಶ್ರೀ ಗಣಪತಿ ಸ್ಮರಣೆ, ಶ್ರೀ ವೀರಾಂಜನೇಯ ಸ್ವಾಮಿಗೆ ಪೂಜೆ, ಬೆಳಿಗ್ಗೆ 10ಕ್ಕೆ ಶ್ರೀ ಗುರುಗಳವರ ಪಾದುಕೆಗೆ ಲಘುನ್ಯಾಸಪೂರ್ವಕ ಏಕದಶವರ್ತನ ರುದ್ರಾಭಿಷೇಕ, 12ಕ್ಕೆ ಶ್ರೀ ಶಿವಾನಂದ ತೀರ್ಥಗುರುಗಳವರ ತೊಟ್ಟಿಲೋತ್ಸವ, ಮಧ್ಯಾಹ್ನ 1 ಕ್ಕೆ ಮಹಾಮಂಗಳಾರತಿ ತೀರ್ಥಪ್ರಸಾದ ವಿನಿಯೋಗ. ಸಂಜೆ 6 ರಿಂದ 7ರವರೆಗೆ ಶ್ರೀ ವಾಸವಿ ಭಜನಾ ಮಂಡಳಿ ಹಾಗೂ ತಂಡದವರಿಂದ ಭಜನೆ, ತೀರ್ಥಪ್ರಸಾದ ವಿನಿಯೋಗವಿರುತ್ತದೆ.

# ಕೃಷಿ ಪಂಡಿತ್, ಆತ್ಮ ಶ್ರೇಷ್ಠ ಕೃಷಿಕ ಪ್ರಶಸ್ತಿ : ಜಿಲ್ಲೆಯ ರೈತರಿಂದ ಅರ್ಜಿ

ದಾವಣಗೆರೆ, ಆ.1- ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಜಿಲ್ಲೆಯ ರೈತರಿಂದ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಆತ್ಮ ಶ್ರೇಷ್ಠ ಕೃಷಿಕ ಪ್ರಶಸ್ತಿ ಮತ್ತು ರಾಜ್ಯ ಮಟ್ಟದ ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸಂಬಂಧ ಪಟ್ಟ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಿಂದ ಪಡೆದು, ಆಗಸ್ಟ್ 5ರ ಒಳಗಾಗಿ ಸಲ್ಲಿಸಬೇಕು. ಮಾಹಿತಿಗಾಗಿ ಆಯಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಅಥವಾ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸಿ.

# ನಗರದ ಬಿಇಎ ಶಾಲೆಯಲ್ಲಿ ಇಂದು ಹೂಡಿಕೆ ಸಮಾರಂಭ

ಬಾಪೂಜಿ ಶೈಕ್ಷಣಿಕ ಸಂಘ, ಬಿ.ಇ.ಎ. ಹೈಯರ್ ಪ್ರೈಮರಿ ಸಿಬಿಎಸ್‌ಇ ಶಾಲೆಯಲ್ಲಿ ಹೂಡಿಕೆ ಸಮಾರಂಭ ಮತ್ತು ವಿದ್ಯಾರ್ಥಿ ಸಂಘದ ಉದ್ಘಾಟನೆ 'ಕಲಾವೃಕ್ಷ' ಕಾರ್ಯಕ್ರಮವು ಇಂದು ಬೆಳಿಗ್ಗೆ 10ಕ್ಕೆ ಶಾಲೆಯಲ್ಲಿ ನಡೆಯಲಿದೆ.

ಪ್ರೊ. ವೈ.ವೃಷಭೇಂದ್ರಪ್ಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುವರು. ಮುಖ್ಯ ಅತಿಥಿಗಳಾಗಿ ಹೆಚ್. ಬಿ. ಮಂಜುನಾಥ್, ಪ್ರಾಂಶುಪಾಲ ಹೆಚ್.ಎಸ್. ಸತೀಶ್, ಯುನಿಯನ್ ಪ್ರತಿನಿಧಿಗಳಾದ ಜಂಟಿ ಕಾರ್ಯದರ್ಶಿ ಜೀವನ್ ಕೃಷ್ಣ, ಸಾಂಸ್ಕೃತಿಕ ಕಾರ್ಯದರ್ಶಿ ಮೊಹಮ್ಮದ್ ಜೈದ್, ಕ್ರೀಡಾ ಕಾರ್ಯದರ್ಶಿ ಮೊಹಮ್ಮದ್ ಅನಸ್ ಖಾನ್, ಗ್ರಂಥಾಲಯ ಮತ್ತು ಓದುವಿಕೆ ಸಾನ್ವಿ ಡಿ.ಪಿ., ಪ್ರವಾಸ ಕಾರ್ಯದರ್ಶಿ ಕೀರ್ತನಾ ಆರ್. ಉಪಸ್ಥಿತರಿರುವರು.

# ನಾಡಿದ್ದು ನಗರಕ್ಕೆ ಮೂಳೆ ವೈದ್ಯರು

ದಾವಣಗೆರೆ, ಆ. 1 - ರಾಮನಗರ ಜಿಲ್ಲೆಯ ಕುದೂರಿನ ಪಾರಂಪರಿಕ ಮೂಳೆ ವೈದ್ಯ ಮಹದೇವಯ್ಯ ಇದೇ ದಿನಾಂಕ ದಿನಾಂಕ 4ರ ಭಾನುವಾರ ನಗರಕ್ಕೆ ಆಗಮಿಸಲಿದ್ದು, ನಿಟುವಳ್ಳಿಯ ಪತಂಜಲಿ ವೆಲ್‌ನೆಸ್ ಸೆಂಟರ್‌ನಲ್ಲಿ ಮಧ್ಯಾಹ್ನ 3 ಗಂಟೆಗೆ ಚಿಕಿತ್ಸೆ ನೀಡಲಿದ್ದಾರೆ ಎಂದು ಕೆ.ಎಂ. ಪುಷ್ಪಲತಾ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9743895325, 8310748946, 9880107918.

# ಉತ್ತರ ಭಾರತದಲ್ಲಿ ಬಿರು ಮಳೆಯಿಂದ 20 ಸಾವು

ನವದೆಹಲಿ, ಆ. 1 - ಉತ್ತರ ಭಾರತದ ಹಲವೆಡೆ ತೀವ್ರ ಮಳೆ ಹಾಗೂ ಭೂಕುಸಿತದ ಕಾರಣದಿಂದ 20 ಜನರು ಸಾವನ್ನಪ್ಪಿದ್ದಾರೆ.

ಕೇರಳದ ವಯನಾಡ್ ಜಿಲ್ಲೆಯಲ್ಲಿ ನಡೆದ ಭೂಕುಸಿತದಲ್ಲಿ ಮೃತರ ಸಂಖ್ಯೆ 190ಕ್ಕೆ ಏರಿಕೆಯಾಗಿದೆ. ಕಾರ್ಯಾಚರಣೆ ಇನ್ನೂ ಮುಂದುವರೆಯುತ್ತಿದ್ದು, ಮೃತರ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಅಧಿಕಾರಿಗಳು ಹೇಳಿದ್ದಾರೆ.

ಉತ್ತರಾಖಂಡದಲ್ಲಿ ಸುರಿದ ಭಾರೀ ಮಳೆಯಿಂದಾಗಿ ಹಲವು ಮನೆಗಳು ಕುಸಿದಿವೆ ಹಾಗೂ ಕೆಲ ಪ್ರದೇಶಗಳು ಜಲಾವೃತಗೊಂಡಿವೆ. ಮಳೆ ಅನಾಹುತದಲ್ಲಿ 12 ಜನ ಸಾವನ್ನಪ್ಪಿದ್ದಾರೆ.

ಪಕ್ಕದ ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆಯಿಂದಾಗಿ ಐವರು ಮೃತಪಟ್ಟಿದ್ದಾರೆ ಹಾಗೂ 50 ಜನ ಕಾಣೆಯಾಗಿದ್ದಾರೆ.

ರಾಜಧಾನಿ ದೆಹಲಿಯಲ್ಲಿ ಮಳೆ ಕಾರಣದಿಂದ ಸಂಭವಿಸಿದ ಅನಾಹುತಗಳಲ್ಲಿ ಮೂವರು ಸಾವನ್ನಪ್ಪಿದ್ದಾರೆ. ರಾಜಸ್ಥಾನದ ಜೈಪುರದಲ್ಲಿ ಮೂವರು ಮೃತಪಟ್ಟಿದ್ದಾರೆ. ಉಡುಪಿ ಜಿಲ್ಲೆಯ ನೆಲ್ಲಿಕಾರು ಗ್ರಾಮದಲ್ಲಿ ಮನೆ ಕುಸಿದು 56 ವರ್ಷದ ಮಹಿಳೆ ಒಬ್ಬರು ಸಾವನ್ನಪ್ಪಿದ್ದಾರೆ.

## ಓದುಗರ ಪತ್ರ

### ಅನೈತಿಕ, ಅಡ್ಡದಾರಿ ಹಿಡಿದು ದೇವಿಯರ ಮೊರೆ ಹೋಗುವುದು ಭ್ರಮೆ

**ಮಾನ್ಯರೇ,**

ಚಿತ್ರನಟ ದರ್ಶನ್ ಹೆಂಡತಿ ವಿಜಯಲಕ್ಷ್ಮಿ ಹಾಗೂ ಸಹೋದರ ದಿನಕರ್ ದರ್ಶನ್ ಗೆ ಜೈಲಿನಲ್ಲಿ ಮನೆ ಊಟಕ್ಕಾಗಿ ಕೊಲ್ಲೂರಿನ ಮೂಕಾಂಬಿಕಾ ದೇವಿಗೆ ಮಹಾಚಂಡಿಕಾ ಯಾಗ ಮತ್ತು ಮೈಸೂರಿನಲ್ಲಿ ಚಾಮುಂಡೇಶ್ವರಿಗೆ ಪೂಜೆ ಮಾಡಿಸಿ, ದೇವತೆಗಳ ಮೊರೆ ಹೋಗಿರುವುದು ವಿರೋಧಾಭಾಸವಾಗಿದೆ.

ಕೆಲವು ತಿಂಗಳ ಹಿಂದೆ ತಮ್ಮ ಕುಟುಂಬ ಕಾನೂನು ಸಂಕಷ್ಟಗಳಿಂದ ಬಿಡುಗಡೆ ಹೊಂದಲು ಪುರೋಹಿತರ ಮಾತಿನಂತೆ ಹೆಚ್.ಡಿ. ರೇವಣ್ಣ 9 ಶಕ್ತಿ ದೇವಿಯರ ಮೊರೆ ಹೋಗಿ ಪೂಜೆ, ಪೌರೋಹಿತ್ಯ, ಯಾಗ, ಯಜ್ಞ ಮಾಡಿ, ಮಾಡಿದ ತಪ್ಪುಗಳನ್ನೆಲ್ಲ ಸರಿಪಡಿಸಿಕೊಳ್ಳಬಹುದೆಂಬುದು ಸಮಾಜಕ್ಕೆ ತಪ್ಪು ಸಂದೇಶ ನೀಡುತ್ತಿದೆ. ಇವು ಅನೈತಿಕ, ಅಡ್ಡದಾರಿ ಹಿಡಿದರೂ ದೇವತೆಗಳ ಒಲಿಸಿಕೊಂಡು ಜಯ ಸಂಪಾದಿಸಬಹುದೆಂಬ ಭ್ರಮೆಯನ್ನುಂಟುಮಾಡಿ ಅಂಧಭಕ್ತರ ದಾರಿ ತಪ್ಪಿಸುವ ಉದಾಹರಣೆಗಳು.

ಇವರಿಬ್ಬರ ವಿಷಯದಲ್ಲಿ ಮಾಡಿದುಣ್ಣೋ ಮಾರಾಯ, ಉಪ್ಪು ತಿಂದ ಮೇಲೆ ನೀರು ಕುಡಿಯಲೇ ಬೇಕು ಎನ್ನುವ ಗಾದೆ ಮಾತು ಸತ್ಯವಾಗಿದೆ. ಯಾರೇ ಆಗಲಿ ಅಧಿಕಾರ, ಕಾಮಿನಿ, ಕಾಂಚಾಣ, ಕಾಸಿನ ವಿಷಯಗಳಲ್ಲಿ ನೀತಿ ತಪ್ಪಿ ದೇವರ ಮೊರೆ ಹೋಗಿ ದೇವರು ರಕ್ಷಿಸುತ್ತಾರೆನ್ನುವುದು ಮೌಢ್ಯದ ಭ್ರಮೆಗಳು. ನಮಗೆಲ್ಲ ತಿಳಿದಿರುವಂತೆ ದೇವರ ಕಲ್ಪನೆ ಸತ್ಯಕ್ಕೆ ಜಯ, ಅಸತ್ಯಕ್ಕೆ ಸೋಲು. 'ದುಷ್ಟ ಶಿಕ್ಷೆ, ಶಿಷ್ಟ ರಕ್ಷೆ' ಎನ್ನುವುದಲ್ಲವೇ?.

**- ಶಿವನಕೆರೆ ಬಸವಲಿಂಗಪ್ಪ,**
ಕರುಣಾ ಜೀವ ಕಲ್ಯಾಣ ಟ್ರಸ್ಟ್, ದಾವಣಗೆರೆ

### ಗುಂಡಿ ಮುಚ್ಚಿಸಿ ಅಪಘಾತ ತಪ್ಪಿಸಿ.!



**ಮಾನ್ಯರೇ,**

ನಗರದ ಹೃದಯ ಭಾಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಜನನಿಬಿಡ ಪ್ರದೇಶ, ಗಾಂಧಿ ವೃತ್ತದ ಬಳಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿಸಿ ದಿನಂಪ್ರತಿ ನಡೆಯುವ ಅಪಘಾತಗಳನ್ನು ತಪ್ಪಿಸಿ ಮಹಾಸ್ವಾಮಿಗಳೇ ಎಂಬುದು ಇಲ್ಲಿ ಸಂಚರಿಸುವ ವಾಹನ ಸವಾರರ ಮನವಿಯಾಗಿದೆ.

ಉತ್ತರ ದಿಕ್ಕು ಜಗಳೂರು ರಸ್ತೆಯಿಂದ ಪ್ರವೇಶಿಸುವ ಸಂಚಾರಿಗಳಿಗೆ ಮೋತಿ ಚಿತ್ರ ಮಂದಿರದ ಎದುರು ಇರುವ ಗುಂಡಿ ಹಾಗೂ ಗಾಂಧಿ ವೃತ್ತದಿಂದ ಅಶೋಕ ರಸ್ತೆ ಪ್ರವೇಶಿಸುವ ಪೊಲೀಸ್ ಇಲಾಖೆ ಅಳವಡಿಸಿರುವ ಸಿಸಿ ಕ್ಯಾಮೆರಾ ಕಂಬದ ಬಳಿ ಇರುವ ಗುಂಡಿಗಳಲ್ಲಿ ವಾಹನ ಸವಾರರು ಬಿದ್ದು ಬಿದ್ದು ಸಾಗುವ ದೃಶ್ಯಗಳು ಸಾಮಾನ್ಯವಾಗಿವೆ.

ಮುಂದೆ ಸಾಗುವ ವಾಹನ ಸವಾರ ಗುಂಡಿ ಕಂಡ ತಕ್ಷಣ ದಿಢೀರ್ ಬ್ರೇಕ್ ಹಾಕಿದಾಗ ಹಿಂದಿನ ಸವಾರ ಡಿಕ್ಕಿ ಹೊಡೆದು ಅಪಘಾತದ ಬಾಯಿಗೆ ತುತ್ತಾಗುತ್ತಾನೆ. ಸಿನಿಮೀಯ ರೀತಿಯಲ್ಲಿ ಪಾರಾಗುವ ಕೆಲವರಂತು ಅದೃಷ್ಟವಶಾತ್ ಬಚಾವ್ ಆದೆ ಎಂದು ನಿಟ್ಟಿಸಿರು ಬಿಡುತ್ತಾ ಮುಂದೆ ಸಾಗುತ್ತಾರೆ.

ಮಳೆಗಾಲವಾಗಿರುವುದರಿಂದ ಯಾವುದು ಗುಂಡಿ, ಯಾವುದು ರಸ್ತೆ ಎಂಬುದು ತಿಳಿಯಲು ಬಹಳ ಕಷ್ಟವಾಗಿದೆ. ಆದ್ದರಿಂದ ನಗರದ ವಿವಿಧ ಪ್ರದೇಶಗಳಲ್ಲಿನ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿಸಿ, ಅಪಘಾತಗಳನ್ನು ತಪ್ಪಿಸುವಲ್ಲಿ ಸಂಬಂಧಿಸಿದ ಅಧಿಕಾರಿಗಳು ಗಮನಹರಿಸಬೇಕಾಗಿದೆ.

**-ಬಿ. ಸಿಕಂದರ್,** ಹಿರಿಯ ಪತ್ರಕರ್ತರು

# ಚುನಾವಣೆಯಲ್ಲಿ ಸೋಲು -ಗೆಲುವು ಸಹಜ

## ಹರಪನಹಳ್ಳಿ ಬಿಜೆಪಿ ಸಭೆಯಲ್ಲಿ ಗಾಯತ್ರಿ ಸಿದ್ದೇಶ್ವರ



ಹರಪನಹಳ್ಳಿ, ಆ. 1 - ಚುನಾವಣೆಯಲ್ಲಿ ಸೋಲು - ಗೆಲುವು ಸಹಜ. ಆದರೆ, ನರೇಂದ್ರ ಮೋದಿಯವರು ಮೂರನೇ ಬಾರಿಗೆ ಪ್ರಧಾನಿಯಾಗಿರುವುದು ಸಂತೋಷ ತಂದಿದೆ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಹೇಳಿದರು.

ಪಟ್ಟಣದ ತೆಲುಗರ ಓಣಿಯಲ್ಲಿರುವ ರಾಮ ದೇವರ ದೇವಸ್ಥಾನದ ಸಭಾ ಭವನದಲ್ಲಿ ಗುರುವಾರ ನಡೆದ ಬಿಜೆಪಿ ಮಂಡಲದ ವಿಶೇಷ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತನಾಡಿದರು.

ಚುನಾವಣೆಯಲ್ಲಿ ಕಡಿಮೆ ಅಂತರದಲ್ಲಿ ಸೋತಿರುವುದು ಸ್ವಲ್ಪ ನೋವುಂಟು ಮಾಡಿದೆ ಆದರೂ ಹರಪನಹಳ್ಳಿ ಹಾಗೂ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರು ಒಗ್ಗಟ್ಟಾಗಿ ಶ್ರಮಿಸಿದಕ್ಕೆ ತಮಗೆ ಅಧಿಕ ಮತಗಳು ಬರಲು ಕಾರಣವಾಯಿತು ಎಂದು ಹೇಳಿದರು.

ಕಾರ್ಯಕರ್ತರು ಸೋಲಿನ ನೋವು ಪಟ್ಟುಕೊಳ್ಳದೇ ಒಗ್ಗಟ್ಟಿನಿಂದ ಪಕ್ಷ ಸಂಘಟಿಸುವ ಮೂಲಕ ಮುಂಬರುವ ಚುನಾವಣೆಗಳಲ್ಲಿ ಗೆಲುವಿಗೆ ಶ್ರಮಿಸಬೇಕು ಎಂದು ಕರೆ ನೀಡಿದರು.

ವಿಜಯನಗರ ಬಿಜೆಪಿ ಜಿಲ್ಲಾ ಅಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಮಾತನಾಡಿ ರಾಜ್ಯದ ಜನತೆಗೆ ಸುಳ್ಳು ಹೇಳಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಇದುವರೆಗೂ ಯಾವುದೇ ಜನಪರ ಯೋಜನೆಗಳನ್ನು ಜಾರಿ ಮಾಡದೇ ಬರೀ ಹಗರಣದಲ್ಲಿ ಮುಳಿಗಿದೆ ಎಂದು ಆರೋಪಿಸಿದರು.

ಬಡವರಿಗಾಗಿ ಮೀಸಲಿಟ್ಟಿದ್ದ ಎಸ್ಟಿ ನಿಗಮದ 187 ಕೋಟಿ ಹಣವನ್ನು ಕಾಂಗ್ರೆಸ್ ಲೂಟಿ ಹೊಡೆದು ಪರಿಶಿಷ್ಟ ಪಂಗಡದ ಜನಾಂಗಕ್ಕೆ ಅನ್ಯಾಯ ಎಸಗಿದ್ದಲ್ಲದೇ ಮುಡಾದಲ್ಲೂ ಆಕ್ರಮವಾಗಿ ಸೈಟು ಪಡೆಯುವ ಮೂಲಕ ಸ್ವತಃ ಮುಖ್ಯಮಂತ್ರಿಗಳೇ ಸಿಲುಕಿ ಹಾಕಿಕೊಂಡಿದ್ದಾರೆ ಎಂದು ಆರೋಪಿಸಿದರು.

ಹರಪನಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಬದಲಾಗುತ್ತಾರೆ ಎಂಬ ವದಂತಿಗಳಿಗೆ ಯಾರು ಕಿವಿಗೊಡಬೇಡಿ ಪಕ್ಷದ ಹೈಕಮಾಂಡ್ ಆದೇಶದ ಮೇರೆಗೆ ಈ ಆಯ್ಕೆ ನಡೆದಿದೆ ಒಂದು ವೇಳೆ ಬದಲಾವಣೆಯಾದರೆ ನಾನು ಜಿಲ್ಲಾಧ್ಯಕ್ಷ ಸ್ಥಾನ ತ್ಯಜಿಸುತ್ತೇನೆ ಎಂದು ಚನ್ನಬಸವನಗೌಡ ಹೇಳಿದರು.

ಬಿಜೆಪಿ ಮಂಡಲ ಅಧ್ಯಕ್ಷ ಕೆ. ಲಕ್ಷ್ಮಣ್, ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸುವರ್ಣ ಆರುಂಡಿ, ಪುರಸಭೆ ಮಾಜಿ ಅಧ್ಯಕ್ಷ ಹಾಲಿ ಸದಸ್ಯ ಎಚ್.ಎಂ. ಅಶೋಕ್, ಮುಖಂಡರಾದ ಆರುಂಡಿ ನಾಗರಾಜ್, ಎಂ.ಪಿ. ನಾಯ್ಕ್, ಬಾಲಹುಣಿಸಿ ರಾಮಣ್ಣ, ಬಾಗಳಿ ಕೊಟ್ರೇಶಪ್ಪ, ಕಣವಿಹಳ್ಳಿ ಮಂಜುನಾಥ, ಎಸ್. ಪಿ. ಲಿಂಬಾನಾಯ್ಕ, ಸತ್ತೂರು ಹಾಲೇಶ್, ಓಂಕಾರಗೌಡ, ಸಂಜೀವ ರೆಡ್ಡಿ, ಕಡ್ಲಿ ರಾಘವೇಂದ್ರ ಶೆಟ್ಟಿ, ಮುದಕವನವರ್ ಶಂಕರ್, ಕುಸುಮ ಜಗದೀಶ್ ಸೇರಿದಂತೆ ಇತರರು ಇದ್ದರು.

# ಹೊನ್ನಾಳಿಯ ಶಿವ ಕ್ರೆಡಿಟ್ ಸೊಸೈಟಿಗೆ ಇಂದು ಬೆಳ್ಳಿ ಮಹೋತ್ಸವದ ಸಂಭ್ರಮ

ಹೊನ್ನಾಳಿ, ಆ. 1 - ಇಲ್ಲಿನ ಶಿವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ 25ನೇ ವರ್ಷದ ಬೆಳ್ಳಿ ಹಬ್ಬದ ಆಚರಣಾ ಮಹೋತ್ಸವ ಕಾರ್ಯಕ್ರಮವನ್ನು ನಾಳೆ ದಿನಾಂಕ 2ರ ಶುಕ್ರವಾರ ಬೆಳಿಗ್ಗೆ 11ಕ್ಕೆ ಗೊಲ್ಲರ ಹಳ್ಳಿಯ ಶ್ರೀ ತರಳಬಾಳು ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸೊಸೈಟಿಯ ಅಧ್ಯಕ್ಷ ಎಂ. ಸತೀಶ್ ತಿಳಿಸಿದರು.


ಶಿವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಪತ್ರಿಕಾಗೋಷ್ಠಿಯನ್ನು ದ್ದೇಶಿಸಿ ಅವರು ಮಾತನಾಡಿದರು.



ಜುಲೈ 2000ರಲ್ಲಿ ಸೊಸೈಟಿಯ ಸಂಸ್ಥಾಪಕ ಎ.ಜಿ. ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ಸಂಸ್ಥೆಯು ಇಂದು 206 ಕೋಟಿ ವಾರ್ಷಿಕ ವಹಿವಾಟು ನಡೆಸುತ್ತಿದೆ. ಸೊಸೈಟಿಯು ಹೊನ್ನಾಳಿ ಪಟ್ಟಣದಲ್ಲಿ ಸುಸಜ್ಜಿತ ಪ್ರಧಾನ ಕಛೇರಿಯ ಕಟ್ಟಡವನ್ನು ಹೊಂದಿದ್ದಲ್ಲದೇ, ಸೊಸೈಟಿಯಲ್ಲಿ 6534 ಸದಸ್ಯರಿದ್ದು, ಸುರಹೊನ್ನೆ, ಸಾಸ್ವೆಹಳ್ಳಿ, ಕುಂದೂರು ಮತ್ತು ಚೀಲೂರು ಹೋಬಳಿ ಕೇಂದ್ರಗಳಲ್ಲಿ ಶಾಖೆಗಳನ್ನು ತೆರೆದು, ಸದಸ್ಯರಿಗೆ ಸೊಸೈಟಿಯು ನೀಡುತ್ತಿರುವ ಉತ್ತಮ ಸೇವೆ ಮತ್ತು ಸೌಲಭ್ಯಗಳಿಂದ ಸದಸ್ಯರ ಸಂಖ್ಯೆ ಹೆಚ್ಚುತ್ತಲೇ ಇದೆ ಎಂದು ಮಾಹಿತಿ ನೀಡಿದರು.

ಶುಕ್ರವಾರ ನಡೆಯಲಿರುವ ಬೆಳ್ಳಿ ಹಬ್ಬದ ಆಚರಣಾ ಮಹೋತ್ಸವದ ಸಾನ್ನಿಧ್ಯವನ್ನು ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕ ಡಿ.ಜಿ. ಶಾಂತನಗೌಡ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಶಾಸಕರಾದ ಎಂ.ಪಿ. ರೇಣುಕಾಚಾರ್ಯ, ಡಾ.ಡಿ.ಬಿ. ಗಂಗಪ್ಪ, ಸಾಧು ವೀರಶೈವ ಸಮಾಜದ ರಾಜ್ಯಾಧ್ಯಕ್ಷ ಎಚ್.ಆರ್. ಬಸವರಾಜಪ್ಪ, ಸಾಧು ವೀರಶೈವ ಸಮಾಜದ ಅಧ್ಯಕ್ಷ ಎಚ್.ಎ. ಗದ್ದಿಗೇಶ್, ಜಿ. ಶಿವಪ್ಪ, ಶಿಮುಲ್ ನಿರ್ದೇಶಕ ಬಿ.ಜಿ. ಬಸವರಾಜಪ್ಪ, ಡಿ.ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕ ಡಿ.ಎಸ್. ಸುರೇಂದ್ರಗೌಡ, ಡಿ.ಜಿ. ವಿಶ್ವನಾಥ್ ಸಹಕಾರ ಅಭಿವೃದ್ಧಿ ಅಧಿಕಾರಿ ನವೀನ್ ಕುಮಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸೊಸೈಟಿಯ ಉಪಾಧ್ಯಕ್ಷೆ ಜಿ. ಯಶೋಧಮ್ಮ, ಕಾರ್ಯದರ್ಶಿ ಎಚ್.ಎನ್. ರುದ್ರೇಶ್, ನಿರ್ದೇಶಕ ಪಿ.ಬಿ. ಶೈಲೇಶ್, ಪಿ.ಚಂದ್ರಪ್ಪ, ಬಿ. ಕೆಂಚಪ್ಪ, ಡಿ.ಜಿ. ಎನ್. ಚನ್ನವೀರಪ್ಪ, ಕೆ.ಎನ್. ಬಸವರಾಜ್, ಆರ್.ಸಿ. ಶಂಕರಗೌಡ, ಕೆ.ಬಿ. ಕರಿಬಸಪ್ಪ, ಕೆ. ಎಸ್. ಶಿವಕುಮಾರ್, ಎನ್.ಇ. ಚೇತನ್‌ಕುಮಾರ್, ಕೆ.ಜಿ. ಮಂಜುಳಾ, ಎನ್. ಕೃಷ್ಣಾನಾಯ್ಕ್ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.


WE HAVE ENDLESS CHOICES
FREE COMPUTERIZED EYE TESTING
By Qualified Optometrist
Saturday We are Open
SOUTH INDIA OPTICALS
Near Ram & Co Circle, Beside Bank of Baroda,
P.J. Extension, Davanagere © 08192-231432 • 08192-462073

ಕರ್ನಾಟಕ ಸರ್ಕಾರ
ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ
**ಜಿಲ್ಲಾ ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸಂಘ, ದಾವಣಗೆರೆ**
ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾಯೋಜನೆ ಕಛೇರಿ, ಜಿಲ್ಲಾ ನಗರಯೋಜನಾ ನಿರ್ವಹಣ ಘಟಕ, ಕೊಠಡಿ ಸಂಖ್ಯೆ:31, ಎಸ್.ಎಸ್. ಹೈಟೆಕ್‌ಆಸ್ಪತ್ರೆ ಹತ್ತಿರ, ಎನ್.ಸಿ.ಸಿ ಕ್ಯಾಂಪ್ ಪಕ್ಕ, ಶ್ರೀರಾಮ ನಗರರಸ್ತೆ, ದಾವಣಗೆರೆ-577 005.
ದೂ..ಸಂಖ್ಯೆ: 08192-263194 ಈ_ಮೇಲ್:cpmudavangere@gmail.com
ಸಂ:ಜಿನಿಘ/ದಾಗೆರೆ/ಎನ್.ಯು.ಹೆಚ್.ಎಂ/ನ.ಕ್ಲಿ.ನೇಮಕಾತಿ/46A/ 2024-25 ದಿನಾಂಕ:29-07-2024

**ಸಂಕ್ಷಿಪ್ತ ನೇಮಕಾತಿ ಅಧಿಸೂಚನೆ**

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ, 15 ನೇ ಹಣಕಾಸು ಆಯೋಗ ಮತ್ತು PM-ABHIM ಕಾರ್ಯಕ್ರಮದಡಿಯಲ್ಲಿ 2024-25 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮಂಜೂರಾಗಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ31-03-2025 ರವರೆಗೆ ಹಾಗೂ 2025-26 ನೇ ಸಾಲಿನ ಆರ್.ಓ.ಪಿ ಅನುಮೋದನೆ ನಿರೀಕ್ಷಿಸಿ ಹುದ್ದೆ ಮುಂದುವರೆಸುವ ಬಗ್ಗೆ ಮಾನ್ಯ ಅಭಿಯಾನ ನಿರ್ದೇಶಕರು ರಾಷ್ಟ್ರೀಯ ಆರೋಗ್ಯ ಅಭಿಯಾನ ಬೆಂಗಳೂರು ರವರು ನೀಡುವ ಆದೇಶದ ಷರತ್ತಿಗೊಳಪಟ್ಟು ಹಾಗೂ ರೋಸ್ಟರ್ ಮತ್ತು ಮೆರಿಟ್ ಅಧಾರದಲ್ಲಿ ನೇಮಕ ಮಾಡಲು ಆಸಕ್ತ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

**ಪದನಾಮ:- ಕಿರಿಯ ಆರೋಗ್ಯ ಸಹಾಯಕರು, ಹುದ್ದೆಗಳ ಸಂಖ್ಯೆ:- 04 ಕಾರ್ಯಕ್ರಮ:- ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ, 15 ನೇ ಹಣಕಾಸು ಆಯೋಗ ಮತ್ತು PM-ABHIM ಕಾರ್ಯಕ್ರಮದಡಿಯಲ್ಲಿ.** ವಿದ್ಯಾರ್ಹತೆ:- (1) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯದ ಆಯೋಗ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿವಿದೋದ್ದೇಶ ಮೂಲ ಆರೋಗ್ಯ ಕಾರ್ಯಕರ್ತರ ತರಭೇತಿಯನ್ನು ಪಡೆದಿರಬೇಕು. (2) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 3 ವರ್ಷಗಳ ಆರೋಗ್ಯ ನೀರಿಕ್ಷಕರ ಡಿಪ್ಲೋಮಾ ಹೊಂದಿರಬೇಕು. (3) ಪಿ.ಯು.ಸಿ (ವಿಜ್ಞಾನ) ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 2 ವರ್ಷಗಳ ಆರೋಗ್ಯ ನೀರಿಕ್ಷಕರ ಡಿಪ್ಲೋಮಾ ಹೊಂದಿರಬೇಕು. (4) ಗಣಕಯಂತ್ರತರಬೇತಿ ಹೊಂದಿರಬೇಕು.

ಅಸಕ್ತರು ಅರ್ಜಿಗಳನ್ನು ದಿನಾಂಕ:17-08-2024 ರಂದು ಬೆಳಗ್ಗೆ 10-30 ರಿಂದ 2-00 ಗಂಟೆವರೆಗೆ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ, ಶ್ರೀರಾಮನಗರ ರಸ್ತೆ, ದಾವಣಗೆರೆ ಎಸ್.ಎಸ್.ಆಸ್ಪತ್ರೆ ಹಿಂಬಾಗ, ಎನ್.ಸಿ.ಸಿ.ಕ್ಯಾಂಪ್ ಪಕ್ಕ, ದಾವಣಗೆರೆ ಇಲ್ಲಿ ಪಡೆಯತಕ್ಕದ್ದು, ಅರ್ಜಿದಾರರು ಸೂಕ್ತ ಅರ್ಜಿಗಳನ್ನು ಪಡೆದು ಸ್ವಯಂ ದೃಢಿಕರಣವಿರುವ ವಿದ್ಯಾರ್ಹತೆ, ಮೀಸಲಾತಿ ಮತ್ತು ಅನುಭವಕ್ಕೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳ ಜೆರಾಕ್ಸ್ ಪ್ರತಿ ಹಾಗೂ ಭಾವಚಿತ್ರದೊಂದಿಗೆ ಸ್ವಯಂ ಅಭ್ಯರ್ಥಿಯೇ ಹಾಜರಾಗಿಅದೇ ದಿನ ಸಂಜೆ 5-00 ಗಂಟೆಯೊಳಗೆ ಭರ್ತಿ ಮಾಡಿದ ಅರ್ಜಿಗಳನ್ನು ಹಿಂದಿರುಗಿಸತಕ್ಕದು , ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಸರ್ಕಾರದ/ಇಲಾಖೆಯ ನಿಯಾಮವಳಿಗಳಂತೆ ವಯೋಮಿತಿ ಮತ್ತು ಮೀಸಲಾತಿ ನಿಗದಿಪಡಿಸಲಾಗಿದೆ. ಯಾವುದೇಕಾರಣ ನೀಡದೇ ಈ ಆಯ್ಕೆ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದು ಪಡಿಸುವ ತೀರ್ಮಾನ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ವಾಸಾಇ/ಡಿವಿಜಿ/192/ ಕೆಎಸ್‌ಎಂಸಿಎ/2024-25
**ಸಹಿ/- ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು, ದಾವಣಗೆರೆ.**




ತುಂಗ ಮತ್ತು ಭದ್ರಾ ಜಲಾಶಯಗಳಿಂದ 1.20 ಲಕ್ಷ ಕ್ಯೂಸೆಕ್ಸ್ ನೀರನ್ನು ನದಿಗೆ ಬಿಟ್ಟಿರುವುದರಿಂದ ಹರಿಹರ ಬಳಿ ತುಂಗಭದ್ರಾ ನದಿ ಮೈದುಂಬಿ ಹರಿಯುತ್ತಿದೆ. ಇದರಿಂದ ರಾಘವೇಂದ್ರ ಸ್ವಾಮಿ ದೇವಸ್ಥಾನ ಹಿಂಭಾಗ ನದಿಯ ದಡದಲ್ಲಿ ನಿರ್ಮಾಣ ಹಂತದಲ್ಲಿರುವ ತುಂಗಾರತಿ ಸ್ಥಳ ಜಲಾವೃತವಾಗಿದೆ.

## ನಗರದಲ್ಲಿ ಇಂದು ವಿದ್ಯುತ್ ಸರಬರಾಜು ವ್ಯತ್ಯಯ

ಪೊಲೀಸ್ ಕ್ವಾಟ್ರರ್ಸ್, ತುಂಗ, ಭದ್ರ, ಸರಸ್ವತಿ, ಕೃಷ್ಣ ಬ್ಲಾಕ್, ಅರುಣಾ ಸರ್ಕಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಮೋತಿ ವೀರಪ್ಪ ಕಾಲೇಜ್ ಹಿಂಭಾಗ, ಸರ್.ಎಂ. ವಿಶ್ವೇಶ್ವರಯ್ಯ ಪಾರ್ಕ್, ಬ್ಲಡ್ ಬ್ಯಾಂಕ್ ವಿಶ್ವಾಸ ಅಪಾರ್ಟ್‌ಮೆಂಟ್, ವಿಶ್ವಾಸ ಪಾರ್ಕ್, ಎಂ.ಬಿ ಪಾರ್ಕ್, ರಾಮ್ ಅಂಡ್ ಕೊ ಸರ್ಕಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಎರಡನೇ ವರ್ಷದ ಪುಣ್ಯಸ್ಮರಣೆ



ಜನನ : 28.1.1928

ನಿಧನ : 02.8.2022

**ಶರಣ ಕರೇಶಿವಪ್ಪ ರೇವಣಸಿದ್ದಪ್ಪನವರು**

ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ನಿಮ್ಮ ಆದರ್ಶ, ಮಾರ್ಗದರ್ಶನವೇ ನಮಗೆ ದಾರಿ ದೀಪ.
ನೀವು ಹಾಕಿ ಕೊಟ್ಟ ಸನ್ಮಾರ್ಗದಲ್ಲಿ

**ಕರೇಶಿವಪ್ಪರ ವಂಶಸ್ಥರು, ಬಾಳೆ ಹೊಲದ ವಂಶಸ್ಥರು
ತೆಲಗಿ ವಂಶಸ್ಥರು, ದಾವಣಗೆರೆ**

ಹೊಂಡದ ರಸ್ತೆ, ಬಾಳೆ ಹೊಲದ ಸಿದ್ದಲಿಂಗಪ್ಪ ಕ್ರಾಸ್, ದಾವಣಗೆರೆ

## ರಾಜ್ಯದಲ್ಲಿ ಮುಂಗಾರು ಮಳೆ ಶೇ.31ರಷ್ಟು ಹೆಚ್ಚಳ

ಬೆಂಗಳೂರು, ಆ. 1 - ರಾಜ್ಯದಲ್ಲಿ ಮುಂಗಾರು ಮಳೆ ಜುಲೈನಲ್ಲಿ ಚುರುಕಾಗಿದ್ದು, ಜೂನ್ ತಿಂಗಳಲ್ಲಿ ಆದ ಕೊರತೆ ನೀಗಿಸಿದೆ. ಪ್ರಸಕ್ತ ಮುಂಗಾರು ಹಂಗಾಮಿನ ಮೊದಲ ಎರಡು ತಿಂಗಳಲ್ಲಿ ಶೇ.31ರಷ್ಟು ಹೆಚ್ಚು ಮಳೆಯಾಗಿದೆ. ಜೂನ್ ತಿಂಗಳಲ್ಲಿ ರಾಜ್ಯದಲ್ಲಿ ವಾಡಿಕೆ ಮಳೆಯಲ್ಲಿ ಶೇ.3ರಷ್ಟು ಕೊರತೆಯಾಗಿತ್ತು. ಆದರೆ, ಜುಲೈನಲ್ಲಿ ರಾಜ್ಯಾದ್ಯಂತ ಧಾರಾಕಾರ ಮಳೆಯಾಗಿದೆ. ಜೂನ್ - ಜುಲೈನಲ್ಲಿ ವಾಡಿಕೆ ಮಳೆ ಪ್ರಮಾಣ 461 ಮಿ.ಮೀ. ಆಗಿದೆ. ಆದರೆ, ವಾಸ್ತವವಾಗಿ 604 ಮಿ.ಮೀ. ಮಳೆ ಸುರಿದಿದೆ. ಒಟ್ಟಾರೆ ಮಳೆಯಲ್ಲಿ ಶೇ.31ರ ಹೆಚ್ಚಾಗಿದೆ. ಕರಾವಳಿ ಕರ್ನಾಟಕದಲ್ಲಿ ವಾಡಿಕೆಗಿಂತ ಶೇ.34ರಷ್ಟು ಹೆಚ್ಚು ಮಳೆಯಾಗಿದೆ. ಉತ್ತರ ಒಳನಾಡಿನಲ್ಲಿ ಶೇ.21 ಹಾಗೂ ದಕ್ಷಿಣ ಒಳನಾಡಿನಲ್ಲಿ ಶೇ.33ರಷ್ಟು ಹೆಚ್ಚು ಮಳೆಯಾಗಿದೆ.

# ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀ ಡಿ.ಟಿ. ಪರಮೇಶ್**

ಶೃತಿ ಮೋಟರ್ಸ್ ಮಾಲೀಕರು
ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು.
ನಿಧನ : 02-08-2023

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಗತಿಸಿತು.
ನಿಮ್ಮ ಆದರ್ಶ, ಮಾರ್ಗದರ್ಶನವೇ ನಮಗೆ ದಾರಿ ದೀಪ.
ನೀವು ಹಾಕಿ ಕೊಟ್ಟ ಸನ್ಮಾರ್ಗದಲ್ಲಿ ಸದಾ ನಾವೆಲ್ಲರು ನಡೆಯುತ್ತಿದ್ದೇವೆ.

**ಇವರ ಸ್ಮರಣಾರ್ಥವಾಗಿ ದಿನಾಂಕ 2.8.2024ರಂದು**

*• ಉಚಿತ ಆರೋಗ್ಯ ತಪಾಸಣೆ • ನೇತ್ರ ತಪಾಸಣೆ • ರಕ್ತದಾನ ಶಿಬಿರವನ್ನು ಒಳಗೊಂಡ ಸಮುದಾಯ ಸೇವೆಯ ದಿನವನ್ನು ಆಯೋಜಿಸಿದ್ದೇವೆ .ಅವರ ಸ್ಮರಣಾರ್ಥವಾಗಿ ನಾವೆಲ್ಲರು ಒಟ್ಟಾಗಿ ಸೇರೋಣ ಮತ್ತು ಅವರ ಹೃದಯಸ್ಪರ್ಶಿ ಕಾರ್ಯಕ್ರಮಕ್ಕೆ ಸಹಕಾರ ನೀಡೋಣ.*

ಶೃತಿ ಮೋಟಾರ್ಸ್ ಪ್ರೈವೇಟ್ ಲಿಮಿಟೆಡ್‌ನ ಎಲ್ಲಾ ಉದ್ಯೋಗಿಗಳಿಗೆ ಆಹ್ವಾನ

**ಸ್ಥಳ : ಶೃತಿ ಮೋಟಾರ್ಸ್ ಪ್ರೈವೇಟ್ ಲಿಮಿಟೆಡ್, ಪಿ.ಬಿ.ರಸ್ತೆ, ದಾವಣಗೆರೆ.**

**ಸಮಸ್ತ ಕಾರ್ಮಿಕ ವರ್ಗ ಹಾಗೂ ಸಿಬ್ಬಂದಿ ವರ್ಗ
ಶೃತಿ ಮೋಟಾರ್ಸ್ ಪ್ರೈವೇಟ್ ಲಿಮಿಟೆಡ್**

## ನಗರದಲ್ಲಿ ನೂತನ 'ಮುಗ್ದ' ರೇಷ್ಮೆ ಸೀರೆ ಅಂಗಡಿ ಉದ್ಘಾಟನೆ



ದಾವಣಗೆರೆ, ಆ.1- ನಗರದ ಡೆಂಟಲ್ ಕಾಲೇಜು ರಸ್ತೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ 'ಮುಗ್ದ' ರೇಷ್ಮೆ ಸೀರೆ ಅಂಗಡಿಯನ್ನು ಶಾಸಕ ಶಾಮನೂರು ಶಿವಶಂಕರಪ್ಪ ಅವರು ನಿನ್ನೆ ಉದ್ಘಾಟಿಸಿದರು.

ಈವರೆಗೂ ಮುಗ್ಧ ಅಂಗಡಿ ರಾಜ್ಯದ 4 ಭಾಗಗಳಲ್ಲಿ ತನ್ನ ಶಾಖೆಯನ್ನು ಹೊಂದಿತ್ತು. 5ನೇ ಶಾಖೆಯಾಗಿ ತನ್ನ ವ್ಯಾಪ್ತಿಯನ್ನು ನಗರದಲ್ಲಿ ವಿಸ್ತರಿಸಿಕೊಂಡಿದೆ.

ಅಂಗಡಿಯು ಭಾರತೀಯ ದೇವಾಲಯದ ವಾಸ್ತು ಶಿಲ್ಪದ ಮಾದರಿಯಲ್ಲಿದ್ದು, ಅಂಗಡಿಗೆ ಪ್ರವೇಶಿಸಿದ ಗ್ರಾಹಕನಿಗೆ ದೇವಸ್ಥಾನದ ಅನುಭವ ನೀಡುತ್ತದೆ ಮತ್ತು ಭಗವಾನ್ ವೆಂಕಟೇಶ್ವರ ಸ್ವಾಮಿಯ ವಿಗ್ರಹವು ಗ್ರಾಹಕರನ್ನು ದೇವಾಲಯದ ಅಲೆಯಲ್ಲಿ ತೇಲಿಸಲಿದೆ.

ಅತ್ಯುತ್ತಮ ಕುಶಲ ಕರ್ಮಿಗಳಿಂದ ನೇಯ್ದ ಕಾಂಚಿವರಂ ಸೀರೆಯಿಂದ ಬನಾರಸ್, ಇಕ್ಕತ್‌ನಿಂದ ಗದ್ವಾಲ್, ಪೈಥಾನಿಯಿಂದ ಉಪ್ಪಾಡವರೆಗಿನ ಸೀರೆಗಳು ಸಿಗಲಿವೆ ಎಂದು ಕಂಪನಿಯ ನಿರ್ದೇಶಕ ರಾಜೇಶ್ ತಿಳಿಸಿದ್ದಾರೆ.

# ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



**ಶ್ರೀ ಎನ್.ಜಿ. ಮೋಹನ್ ನೀಲಗುಂದ**

ದಿನಾಂಕ : 21-07-2024

ದಾವಣಗೆರೆ ಸಿಟಿ, 7ನೇ ಮೇನ್, 7ನೇ ಕ್ರಾಸ್, ಪಿ.ಜೆ. ಬಡಾವಣೆ ವಾಸಿ
ಶ್ರೀಮತಿ ಪುಷ್ಪಲತಾ ಮೋಹನ್ ನೀಲಗುಂದ, ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 21-07-2024ನೇ ಭಾನುವಾರ ಬೆಳಗಿನ ಜಾವ 3-30 ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಎನ್.ಜಿ. ಮೋಹನ್ ನೀಲಗುಂದ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ವೈಕುಂಠ ಸಮಾರಾಧನೆ'ಯನ್ನು ದಿನಾಂಕ 02-08-2024ನೇ ಶುಕ್ರವಾರ ಬೆಳಿಗ್ಗೆ 9-00 ಕ್ಕೆ ಮೃತರ ಸ್ವಗೃಹ, 7ನೇ ಮೇನ್, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ನೀಲಗುಂದ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 82771 89984, 98803 35888

ವಿ.ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

# ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ಆನೆಕೊಂಡ ವಾಸಿ
**ಶ್ರೀಮತಿ ಸಿದ್ದಪ್ಪ ಶಾರದಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 26.07.2024ನೇ ಶುಕ್ರವಾರ ಸಂಜೆ 6.30ಕ್ಕೆ ನನ್ನ ಪೂಜ್ಯ ಪತಿಯವರಾದ

**ಶರಣ ಶ್ರೀ ಸಿದ್ದಪ್ಪ ಚನ್ನಬಸಪ್ಪನವರು**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 03.08.2024ನೇ ಶನಿವಾರ ಬೆಳಿಗ್ಗೆ 11.30 ಗಂಟೆಗೆ ದಾವಣಗೆರೆ ಸಿಟಿ ಆನೆಕೊಂಡದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ.
ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಸಿದ್ದಪ್ಪ ಶಾರದಮ್ಮ ಮತ್ತು ಮಕ್ಕಳಾದ
ಶ್ರೀಮತಿ ಗೀತಾ, ಶ್ರೀ ರೇವಣಸಿದ್ದಪ್ಪ ಎಸ್. ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಅಳಿಯಂದಿರು
ಶ್ರೀಮತಿ ಆಶಾ, ಶ್ರೀ ನಾಗರಾಜ ಎಸ್., ಹಿರಿಯ ವಕೀಲರು ಮತ್ತು ಮಕ್ಕಳು
ಶ್ರೀಮತಿ ವೀಣಾ, ಶ್ರೀ ಬಸವರಾಜ್ ಎಸ್. ಮತ್ತು ಮಕ್ಕಳು, ಮೊಮ್ಮಗ ಹಾಗೂ ಅಳಿಯ
ಶ್ರೀಮತಿ ರೂಪಾ, ಶ್ರೀ ಪ್ರಭುದೇವ ಎಸ್. ಡಿಜಿಎಂ, ಡಿಸಿಸಿ ಬ್ಯಾಂಕ್, ಮತ್ತು ಮಕ್ಕಳು
ಶ್ರೀಮತಿ ಪ್ರೀತಿ, ಶ್ರೀ ಮಹದೇವಪ್ಪ ಎಸ್. ಮತ್ತು ಮಕ್ಕಳು.
ಶ್ರೀಮತಿ ಪ್ರೇಮ, ಶ್ರೀ ತಿಪ್ಪೇಸ್ವಾಮಿ ಹೆಚ್.ಜೆ., ಡಿ.ವೈ.ಎಸ್.ಪಿ. ಲೋಕಾಯುಕ್ತ, ಬೆಂಗಳೂರು ಮತ್ತು ಮಕ್ಕಳು
ಸಿದ್ದಪ್ಪ ವಂಶಸ್ಥರು, ಗ್ರಾಮಸ್ಥರು, ಆನೆಕೊಂಡ ಹಾಗೂ ಬಂಧು-ಮಿತ್ರರು.

94485 18271, 78920 18341

ವಿಶೇಷ ಸೂಚನೆ : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

# ಕಲಾಸಿರಿ ಸ್ನೇಹ ಕೂಟ (ರಿ.) ದಾವಣಗೆರೆ.



## ಅಭಿನಂದನೆಗಳು

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ
ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿರುವ
ದಾವಣಗೆರೆ ನಗರಸಭೆಯ ಮಾಜಿ ಅಧ್ಯಕ್ಷರೂ,
ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳೂ ಮತ್ತು
ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರೂ, ನಮ್ಮೆಲ್ಲರ ಸ್ನೇಹಿತರೂ ಆದ

**ಶ್ರೀ ದಿನೇಶ್ ಕೆ. ಶೆಟ್ಟಿ**

ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.







KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas